7

# ಪರಿಶುದ್ಧ ನೆಲದ ಮೇಲೆ ನಿಂತು ಕೊಳ್ಳುವುದು

## (2 ಸಮುವೇಲ 6; 7; 1 ಪೂರ್ವಕಾಲವೃತ್ತಾಂತ 13:15-17; 22; 28)

ಮೋಶೆಯು ಉರಿಯುತ್ತಿರುವ ಮುಳ್ಳಿನ ಪೊದೆಯ ಹತ್ತಿರ ಬಂದಾಗ, ದೇವರು ಅವನಿಗೆ ನೀನು ಹತ್ತಿರ ಬರಬೇಡ, "ನಿನ್ನ ಕಾಲಿನ ಕೆರಗಳನ್ನು ತೆಗೆದು ಹಾಕು; ನೀನು ನಿಂತಿರುವ ಸ್ಥಳವು ಪರಿಶುದ್ಧ ಭೂಮಿ ಎಂದು ಹೇಳಿದನು" (ವಿಮೋಚನಕಾಂಡ 3:5). ಈ ದಿವಸ ನಾವು ಆತನನ್ನು ಆರಾಧಿಸಲು ಒಟ್ಟಾಗಿ ಬರುವಾಗ, ನಾವು ಪರಿಶುದ್ಧವಾದ ನೆಲದ ಮೇಲೆ ನಿಂತುಕೊಳ್ಳುತ್ತೇವೆ. ಮತ್ತು ಆತನ ಸನ್ನಿಧಿಯಲ್ಲಿರುತ್ತೇವೆ. ನಾವು ಆತನನ್ನು ಆರಾಧಿಸಲು ಬರುವಾಗ ಇದನ್ನು ಗ್ರಹಿಸುತ್ತೇವೋ, ಅಥವಾ ಇದು ಸಾಧಾರಣ ಸ್ಥಳ ವೆಂದು ತಿಳಿದು ಅಗೌರವದಿಂದ ಬರುತ್ತೇವೋ?

ದೇವರು ಯಾರು, ಆತನು ಎಂಥವನಾಗಿದ್ದಾನೆ ಎಂಬುದಾಗಿ ತಿಳಿಸುವದಕ್ಕೆ ಆರಾಧನೆಯು ಅತಿ ಪ್ರಾಮುಖ್ಯವಾದ ಪ್ರತಿಕ್ರಿಯೆಯಾಗಿರುತ್ತದೆ, ಅದು ಕೇವಲ ನಮೋದಾಗಿರುವ ಕಾರ್ಯನಿರ್ವಹಣೆಯಾಗಿರುವದಿಲ್ಲ; ಇದು ಸರ್ವಶಕ್ತನ ವ್ಯಕ್ತಿತ್ವವನ್ನು ಆತನ ಬಲವನ್ನು ಒಪ್ಪಿಕೊಳ್ಳುವಂಥದ್ದೇ ಆಗಿದೆ. ಈ ದಿವಸಗಳಲ್ಲಿ ಆರಾಧನೆಯಲ್ಲಿ ಬದಲಾವಣೆಯ ಅವಶ್ಯಕತೆ ಇದೆ ಎಂದು ನಾವು ಕೇಳಿ ಬಂದಿದ್ದೇವೆ. ಹೌದು ಬದಲಾವಣೆ ಅವಶ್ಯವಿದೆ - ನಾವು ಆರಾಧನೆಯನ್ನು ನಡೆಸುವ ವಿಧದಲ್ಲಿ ಬದಲಾವಣೆ ಅಲ್ಲ. ಆದರೆ *ನಮ್ಮ ಹೃದಯದಲ್ಲಿ ಬದಲಾವಣೆ*! ನಾವು ನೀರಸರಾಗಿರುವದರಿಂದ, ನಮ್ಮ ಭಕ್ತಿಯನ್ನು ದೇವರಿಗೆ ತೋರಿಸಲು ನಮಗೆ ಪ್ರೋತ್ಸಾಹ ನೀಡುವ ಆತ್ಮೀಕವಾದ, ಉಲ್ಲಾಸದ, ನಾಯಕರುಗಳ ಅವಶ್ಯವಿದೆ. ನಾವು ದೇವರನ್ನು ಸಂಧಿಸುವಾಗ, ನಾವು ಪರಿಶುದ್ಧ ನೆಲದ ಮೇಲೆ ಇದ್ದೇವೆ ಎಂದು ಇನ್ನೊಂದು ಸಾರಿ ಗ್ರಹಿಸಿಕೊಳ್ಳ ಬೇಕಿದೆ!

2 ಸಮುವೇಲ 6; 7 (1 ಪೂರ್ವಕಾಲವೃತ್ತಾಂತದ ಸಂಬಂಧ ಪಟ್ಟ ಭಾಗ) ದೇವರ ಸನ್ನಿಧಿಗೆ ಬರುವುದು ಶೋಭಾಯಮಾನವಾದದ್ದು ಎಂಬ ನೆನಪು ಮಾಡುತ್ತದೆ. ಕರ್ತನ ಹೃದಯಕ್ಕೆ ಹತ್ತಿರವಾಗಿದ್ದ, ದಾವೀದನಿಗೆ ಇದು ಎಷ್ಟು ಅವಶ್ಯವಿತ್ತೋ, ಅಷ್ಟೇ ಅವಶ್ಯ ನಮಗೂ ಇದೆ.

ದಾವೀದನ ಆಳ್ವಿಕೆಯ ಮೊದಲ ದಿನಗಳಲ್ಲೆ ಜನರನ್ನು ತೃಪ್ತಿಪಡಿಸುವದರಲ್ಲಿ ದಾವೀದನು ಸಫಲನಾಗಿದ್ದನು. ಅವನ ಮೂವತ್ತನೇ ವಯಸ್ಸಿನಲ್ಲಿಯೇ ತನ್ನ ದೇಶವನ್ನು ಐಕ್ಯತೆಗೆ ನಡೆಸಿದ್ದನು, ಯೆರೂಸಲೇಮಿನಲ್ಲಿ ತನ್ನ ರಾಜಧಾನಿಯನ್ನು ಸ್ಥಾಪಿಸಿದನು. ಮತ್ತು ನ್ಯಾಯವಾದ, ತಾರತಮ್ಯ ಮಾಡಿದ ಅಧೀಶ್ವರನೆಂದು ತೋರಿಸಿಕೊಟ್ಟನು. ಇದು ಕೇವಲ ಪೀಠಿಕೆ ಮಾತ್ರವಾಗಿತ್ತು. ಈಗಾಗಲೇ ಉತ್ತರ ಮತ್ತು ದಕ್ಷಿಣವನ್ನು ಐಕ್ಯತೆಗೆ ನಡೆಸಿದ್ದನು; ಈಗ ದೇವರನ್ನು ಮತ್ತು ಮನುಷ್ಯರನ್ನು ಸಂಧಾನ ಮಾಡುವ ಕಾರ್ಯಕ್ಕೆ ಮುಂದಾದನು. ಆತನು ಒಳ್ಳೆಯ ಮನೋಭಾವನೆಯನ್ನು ಹೊಂದಿದ್ದ ಅರಸನಾಗಿದ್ದರೂ - ನಮ್ಮ ಹಾಗೆ ಆರಾಧನೆಯ ವಿಷಯದಲ್ಲಿ ಕಲಿಯುವ ಅವಶ್ಯವಿತು.

"ಪರಿಶುದ್ಧವಾದ ನೆಲದ ಮೇಲೆ ನಿಂತುಕೊಳ್ಳುವುದು" ಹೇಗೆ ಎಂಬುದಾಗಿ ತಿಳುಕೊಳ್ಳುವದಕ್ಕೆ 2 ಸಮುವೇಲ 6; 7 ಮತ್ತು 1 ಪೂರ್ವಕಾಲ ವೃತ್ತಾಂತ 13-17ರ ಮೂಲಕ ಹಾದು ಹೋಗೋಣ.

## ಆರಾಧನೆ ಗಂಭೀರವಾದ ವ್ಯವಹಾರ
## (2 ಸಮುವೇಲ 6:1-11; 1 ಪೂರ್ವಕಾಲವೃತ್ತಾಂತ 13:1-14)

ದಾವೀದನು ಯೆರೂಸಲೇಮವನ್ನು ವಶಪಡಿಸಿಕೊಂಡ ತಕ್ಷಣ ಮೊದಲನೆಯದಾಗಿ, ಒಡಂಬಡಿಕೆಯ ಮಂಜೂಷವನ್ನು ಯೆರೂಸಲೇಮಿಗೆ ತರಲು ತೀರ್ಮಾನ ಮಾಡಿದನು. ಯೆರೂಸಲೇಮನ್ನು "ದಾವೀದ ನಗರವನ್ನಾಗಿ" ಮಾಡುವದಲ್ಲದೆ ಅದನ್ನು *ದೇವರ* ನಗರವನ್ನಾಗಿ ಮಾಡುವದೇ ಅವನ ಪ್ರಥಮ ಆಧ್ಯತೆಯಾಗಿತ್ತು. ದೇವರನ್ನೇ ದೇಶದ ಕೇಂದ್ರ ವ್ಯಕ್ತಿಯನ್ನಾಗಿ ಮಾಡುವದು ಅವನ ಉದ್ದೇಶವಾಗಿತ್ತು.

"ಇಸ್ರಾಯೇಲ್ ಸಮಸ್ತ ಸಮೂಹದವರಿಗೆ - ನಿಮ್ಮ ಸಮ್ಮತಿಯೂ ನಮ್ಮ ದೇವರಾದ ಕರ್ತನ ಚಿತ್ತವೂ ಇರುವದಾದರೆ ... ಸೌಲನ ಕಾಲದಲ್ಲಿ ಅಲಕ್ಷ್ಯ ಮಾಡಿದ ನಮ್ಮ ದೇವ ಮಂಜೂಷವನ್ನು ತೆಗೆದುಕೊಂಡು ಬರೋಣ ಅಂದನು" (1 ಪೂರ್ವಕಾಲವೃತ್ತಾಂತ 13:2, 3). ಇದೇ ಮೊದಲನೇಯ ಸಾರಿ "ನಮ್ಮ ದೇವರ ಮಂಜೂಷದ" ಬಗ್ಗೆ ನಾವು ಓದಿದ್ದೇವೆ. ಆದುದರಿಂದ ನಮ್ಮ ಪಠ್ಯಕ್ರಮದಲ್ಲಿ, ಮಂಜೂಷದ ಕುರಿತ ಹಿನ್ನೆಲೆಯ ಸಮಾಚಾರವನ್ನು ಕ್ರಮವಾಗಿ ನೋಡೋಣ.

ಸೀನಾಯಿ ಪರ್ವತದಲ್ಲಿ ಮೋಶೆಯು ದಶಾಜ್ಞೆಗಳ ಜೊತೆಯಲ್ಲಿ, ದೇವರ ಆರಾಧನೆಗೆ ಸಹಾಯಕವಾಗುವಂತೆ ಒಂದು ದೇವದರ್ಶನದ ಗುಡಾರವನ್ನು ನಿರ್ಮಾಣ ಮಾಡಲು ಆದೇಶವನ್ನು ಸಹ ಪಡೆದನು. ಒಡಂಬಡಿಕೆಯ ಮಂಜೂಷವು ದೇವದರ್ಶನದ ಗುಡಾರದಲ್ಲಿ ಇಡಬೇಕಾದ ಪೀಠೋಪಕರಣಗಳಲ್ಲಿ ಒಂದಾಗಿತ್ತು. ಒಡಂಬಡಿಕೆಯ ಮಂಜೂಷವನ್ನು ಚಿನ್ನದಿಂದ ತಯಾರಿಸಲ್ಪಟ್ಟ ಚಿಕ್ಕ ಪೆಟ್ಟಿಗೆಯಾಗಿತ್ತು. ಆ ಪೆಟ್ಟಿಗೆಯಲ್ಲಿ ಮೂರು ವಸ್ತುಗಳಿದ್ದವು: ದಶಾಜ್ಞೆಯ ಎರಡು ಕಲ್ಲಿನ ಹಲಗೆಗಳು, ಮನ್ನ ಇಟ್ಟಿದ ಚಿನ್ನದ ಪಾತ್ರೆ, ಹಾಗೂ ಆರೋನನ ಚಿಗುರಿದ ಕೋಲು ಅದರ ಮುಚ್ಚಳವನ್ನು ಚಿನ್ನದಿಂದ ಮಾಡಿದ್ದರು. ಅದಕ್ಕೆ "ಕೃಪಾಸನ"[1] ಎಂದು ಹೆಸರು. ಕೃಪಾಸನದ ಎರಡೂ ಕೊನೆಗಳಲ್ಲಿ ಕೆರೂಬಿಯರ[2] ಎರಡು ಬಂಗಾರದ ಆಕಾರಗಳನ್ನು ನಕಾಸಿ ಕೆಲಸದಿಂದ ಮಾಡಿಸಬೇಕು, ಕೃಪಾಸನದ ಒಂದೊಂದು ಕೊನೆಯಲ್ಲಿ ಒಂದೊಂದು ಕೆರೂಬಿಯನ್ನು ಮಾಡಿ ಕೃಪಾಸನಕ್ಕೆ ಜೋಡಿಸಬೇಕು. ಆ ಕೆರೂಬಿಗಳು ಮೇಲಕ್ಕೆ ರೆಕ್ಕೆಗಳಿಂದ ಚಾಚುವಂತೆಯೂ, ಕೃಪಾಸನವನ್ನು ಮುಚ್ಚುವಂತೆಯೂ ಇರಬೇಕು ಅವುಗಳ ಮುಖಗಳು ಎದುರುಬದುರಾಗಿ ಇರಬೇಕು. ಮಂಜೂಷದ ಬಗ್ಗೆ ಇನ್ನೊಂದು ವಿವರವನ್ನು ನೀಡಲೇಬೇಕು: ಅದರ ಕೆಳ ಭಾಗದಲ್ಲಿ ಬಂಗಾರದ ಬಳೆಗಳನ್ನು ಇಡಬೇಕು. ಆ ಮಂಜೂಷವನ್ನು ಹೊರುವದಕ್ಕಾಗಿ ಚಿನ್ನದಿಂದ ಹೊಂದಿಸಿರುವ ಮರದ ಕೋಲುಗಳನ್ನು ಸಹ ಮಾಡಿಸಿರಬೇಕು.[3]

ದೇವದರ್ಶನದ ಗುಡಾರವನ್ನು ಸಿದ್ಧಪಡಿಸಿದ ಮೇಲೆ, ಅದರ ಕೇಂದ್ರ ಸ್ಥಳದ ಅತಿ ಪರಿಶುದ್ಧ ಸ್ಥಾನದಲ್ಲಿ ಮಂಜೂಷವನ್ನು ಇಡಬೇಕು. ಆ ಸ್ಥಳಕ್ಕೆ ವರ್ಷಕ್ಕೆ ಒಂದು ಸಾರಿ ಮಹಾ ಯಾಜಕನು ಪ್ರತಿಷ್ಠೆಯ ದಿನದಲ್ಲಿ[4] ಮಾತ್ರ ಭೇಟಿ ನೀಡಬೇಕಿತ್ತು. ಬೇರೆ ಯಾರೂ ಸಹ ಮಂಜೂಷವನ್ನು ನೋಡಬಾರದಿತ್ತು, ಯಾಜಕನೂ ಸಹ ಮುಟ್ಟಬಾರದಿತ್ತು, ಗುಡಾರವನ್ನು ಸಾಗಿಸುವ ಸಮಯ ಬಂದಾಗ (ಲೇವಿಯ ಕುಲಕ್ಕೆ ಸೇರಿದ) ಕೆಹಾತ್ಯರ ಮಕ್ಕಳು ಮಾತ್ರ ಹೊರುವ ಕೋಲಿನ ಸಹಾಯದಿಂದ ತಮ್ಮ ಭುಜದ[5] ಮೇಲೆ ಹೊತ್ತು ಕೊಂಡು ಸಾಗಿಸಬೇಕಿತ್ತು ಅರಣ್ಯಕಾಂಡ 4:15ನ್ನು ಗಮನಿಸಿ:

> ದಂಡುಹೊರಡುವ ಕಾಲದಲ್ಲಿ ಆರೋನನೂ ಅವನ ಮಕ್ಕಳೂ ದೇವಸ್ಥಾನದ ಎಲ್ಲಾ ಸಾಮಾನುಗಳನ್ನು ಮುಚ್ಚಿ ಸಿದ್ಧ ಮಾಡಿದನಂತರ ಕೆಹಾತ್ಯರು ಅವುಗಳನ್ನು ಹೊರುವದಕ್ಕೆ ಬರಬೇಕು. ಇವರು ದೇವಸ್ಥಾನದ ಸಾಮಾನುಗಳನ್ನು ಮುಟ್ಟಬಾರದು; ಮುಟ್ಟಿದರೆ ಸತ್ತಾರು ... .

ಇದೇ ಅಧ್ಯಾಯದ ವಚನ 20ನ್ನು ಗಮನಿಸಿ: "ಕೆಹಾತ್ಯರೇ ಒಳಗೆ ಬಂದು ಒಂದು ಕ್ಷಣವಾದರೂ ಆ ಪರಿಶುದ್ಧ ವಸ್ತುಗಳನ್ನು ನೋಡಬಾರದು; ನೋಡಿದರೆ ಸತ್ತಾರು," "ಸತ್ತಾರು" ಅಥವಾ "ಅವರು ಸಾಯುವರು" ಅನ್ನುವಂಥ ಪದವನ್ನು ನಿಮ್ಮ ಹೃದಯದಲ್ಲಿ ಗುರುತುಮಾಡಿ ಇಟ್ಟುಕೊಳ್ಳಿ. ದೇವದರ್ಶನದ ಗುಡಾರದಲ್ಲಿ ಇಟ್ಟಿದ್ದ ಪೀಠೋಪಕರಣಗಳ ವಸ್ತುಗಳು, ನಮ್ಮ ಮುಖ್ಯ ಪ್ರಸ್ತಾಪವಾದ "ಪರಿಶುದ್ಧ ಭೂಮಿ" ಇದರ ಸಂಕ್ಷಿಪ್ತ ವಿವರಣೆ. ಇದರಲ್ಲಿ ಅತಿ ಪರಿಶುದ್ಧವಾದದ್ದು ದೇವರ ಒಡಂಬಡಿಕೆಯ ಮಂಜೂಷ.

ಪರಿಶುದ್ಧ ಸ್ಥಳಕ್ಕೆ ತಪ್ಪದೇ ಆಗುವ ಸಂಪರ್ಕವು ಕಾಲಾಂತರದಲ್ಲಿ, ಸಾಮಾನ್ಯವಾಗಿ ಬಿಡುತ್ತದೆ. ನಮ್ಮ ಆರಾಧನೆಯು ಸಹ ಈ ರೀತಿ ಸಾಮಾನ್ಯವಾಗಿ ಬಿಡುವ ಸಂದರ್ಭವು ಇರುತ್ತದೆ. ಒಡಂಬಡಿಕೆಯ ಮಂಜೂಷದ ಬಗ್ಗೆ ಇಸ್ರಾಯೇಲ್ಯರಿಗೆ ಇದೇ ಪರಿಸ್ಥಿತಿ ಉಂಟಾಯಿತು.

ಇಸ್ರಾಯೇಲ್ ಕಾನಾನ್ ದೇಶವನ್ನು ತಲುಪಿದಾಗ, ಶಿಲೋವದಲ್ಲಿ ಒಡಂಬಡಿಕೆಯ ಮಂಜೂಷವನ್ನು ನೆಲೆಗೊಳಿಸಿದರು. ಒಂದು ದಿನ ಇಸ್ರಾಯೇಲ್ಯರ ಭಟರುಗಳು ಮಂಜೂಷಕ್ಕಾಗಿ ಬಂದರು (1 ಸಮುವೇಲ 4:4). ಫಿಲಿಷ್ಟಿಯರು ಅವರೊಂದಿಗೆ ಯುದ್ಧ ಮಾಡಿದಾಗ, ಸುಮಾರು ನಾಲ್ಕು ಸಾವಿರ ಇಸ್ರಾಯೇಲ್ಯರು ಮರಣಹೊಂದಿದರು (1 ಸಮುವೇಲ 4:2). ಅನಂತರ ಒಂದು ವೇಳೆ, "ಪೆಟ್ಟಿಗೆಯಲ್ಲಿ - ಇದ್ದಂಥ - ದೇವರ" ಮಂಜೂಷವನ್ನು ಯುದ್ಧ ಭೂಮಿಗೆ ತೆಗೆದು ಕೊಂಡು ಹೋದರೆ, ಅವರಿಗೆ ಶುಭವಾಗುತ್ತದೆ ಎಂದು ನೆನಸಿದರು. ಇಸ್ರಾಯೇಲ್ಯರ ಈ ಮನೋಭಾವವು ದೇವರಿಗೆ ಮೆಚ್ಚಿಕೆಯಾಗಲಿಲ್ಲ. ಅದರ ಮುಂದಿನ ಯುದ್ಧದಲ್ಲಿ ಮಹಾ ಸಂಹಾರವುಂಟಾಗಿ *ಮೂವತ್ತು ಸಾವಿರ* ಕಾಲಾಳುಗಳು ಮಡಿದರು, ದೇವರ ಮಂಜೂಷವು ವೈರಿಗಳಾದ ಫಿಲಿಷ್ಟಿಯರ ವಶವಾಯಿತು (1 ಸಮುವೇಲ 4:10, 11).

ದೇವರ ಮಂಜೂಷವು ಏಳು ತಿಂಗಳುಗಳ ಕಾಲ ಫಿಲಿಷ್ಟಿಯರ ಬಳಿಯಲ್ಲಿತ್ತು. ಅವರಿಗೆ ಅದರಿಂದ ಯಾವ ಪ್ರಯೋಜನವೂ ಉಂಟಾಗಲಿಲ್ಲ. ಬದಲಾಗಿ ಅವರಿಗೆ ದುಖವುಂಟಾಯಿತು. ಅವರ ವಿಗ್ರಹಗಳು ನಾಶವಾದವು. ಅವರಿಗೆ ಗಡ್ಡೇ ರೋಗವು.[6] ಇಲಿಗಳಿಂದ ಭಾದೆಯು ಉಂಟಾಯಿತು. ಮಂಜೂಷವನ್ನು (ಬಂಗಾರದ ಬಹುಮಾನ ಸಹಿತವಾಗಿ) ಬಂಡಿಯ ಮೇಲಿಟ್ಟು ("ಹೊಸ ಬಂಡಿ ಗಮನಿಸಿ")[7] ದೇಶದಿಂದ ಹೊರಗಡೆಗೆ ಕಳುಹಿಸಿ ಎಂದು ಫಿಲಿಷ್ಟಿಯರ ಕಣಿ ಹೇಳುವವರು ಆಲೋಚನೇ ನೀಡಿ ದರು (1 ಸಮುವೇಲ 6:7, 8).

ಮಂಜೂಷವನ್ನು ಹಸುಗಳು ಹೊತ್ತುಕೊಂಡು, ಯೂದಾಯದ ಹತ್ತಿರವಿದ್ದ ಇಸ್ರಾಯೇಲ್ಯರ ಪಟ್ಟಣವಾದ[8] ಬೇತ್‌ಷೆಮೆಷ್‌ಗೆ ಬಂದು ನಿಂತವು. ಇಸ್ರಾಯೇಲ್ಯರು ಮಂಜೂಷವನ್ನು ನೋಡಿ ಸಂತೋಷಪಟ್ಟರು. ಆದರೆ ಅದು ಪರಿಶುದ್ಧವಾದ ಭೂಮಿಯಲ್ಲಿ ಇದೆ ಎಂದು ಅದನ್ನು ಗೌರವಿಸದೆ ಕರ್ತನ ಮಂಜೂಷದಲ್ಲಿ ಇಣಿಕಿ ನೋಡಿದ್ದರಿಂದ ಅವರಲ್ಲಿ ಅನೇಕರು ಸತ್ತರು![9] (1 ಸಮುವೇಲ 6:19). ಇದರಿಂದ ಭಯಗೊಂಡವರಾದ ಬೇತ್‌ಷೆಮಿಷಿನವರು ಮಂಜೂಷವನ್ನು ಹದಿನೈದು ಮೈಲುಗಳ ದೂರವಿದ್ದ ಕಿರ್ಯತ್ಯಾರೀಮಿಗೆ ಸಾಗಗೊಳಿಸಿದರು (1 ಸಮುವೇಲ 7:1).

ದೇವರ ಮಂಜೂಷವು ಸಮುವೇಲನ ಅಂತ್ಯದ ಸೇವಾ ಅವಧಿಯಲ್ಲಿ ಸೌಲನ ಆಡಳಿತ ಸಮಯದಲ್ಲಿ, ಮತ್ತು ದಾವೀದನ ಪ್ರಾರಂಭಿಕ ಆಡಳಿತ ಸಮಯದವರೆಗೂ, ಎಪ್ಪತ್ತು ವರ್ಷಗಳ ಕಾಲ,[10] ದೂಳಿನಿಂದ ತುಂಬಿ ನೆಲಸಿತ್ತು. "ಆಗ ದಾವೀದನು ಸೌಲನ ದಿವಸದಲ್ಲಿ ನಾವು ಅನ್ವೇಷಿಸಲಾಗದ ಮಂಜೂಷವನ್ನು ಹಿಂದೆತೆಗೆದುಕೊಂಡು ಬರೋಣ ಎಂದನು."

> ಅನಂತರ ದಾವೀದನು ಇಸ್ರಾಯೇಲ್ಯರಲ್ಲಿ ಮೂವತ್ತು ಸಾವಿರ ಮಂದಿ ಶ್ರೇಷ್ಠ ಸೈನಿಕರನ್ನು ಆರಿಸಿಕೊಂಡು ದೇವರ ಮಂಜೂಷವನ್ನು ತರುವದಕ್ಕಾಗಿ ಅವರೆಲ್ಲರ ಸಹಿತ ಯೆಹೂದದೇಶದ ಬಾಳಾ ಎಂಬಲ್ಲಿಗೆ (ಕಿರ್ಯತ್ಯಾಮಿಗೆ ಇನ್ನೊಂದು ಹೆಸರು[11])

ಹೋದನು. ಆ ಮಂಜೂಷವು ದೇವನಾಮದಿಂದ ಅಂದರೆ ಕೆರೂಬಿಯರ ನಡುವೆ ಆಸೀನನಾಗಿರುವ ಸೇನಾಧೀಶ್ವರನಾದ ಕರ್ತನ ನಾಮದಿಂದ ಪ್ರಸಿದ್ಧವಾದದ್ದು (2 ಸಮುವೇಲ 6:1, 2).

2 ಸಮುವೇಲ 6:3, "ದೇವರ ಮಂಜೂಷವನ್ನು ಗುಡ್ಡದ ಮೇಲಿರುವ ಅಬೀನಾದಾಬನ ಮನೆಯಿಂದ ಹೊರಗೆ ತಂದು ಅದನ್ನು ಒಂದು ಹೊಸ ಬಂಡಿಯ ಮೇಲೆ ಏರಿಸಿದರು." *"ಹೊಸಬಂಡಿ"?* ಯಾಕೆ ಅವರು ಮಂಜೂಷವನ್ನು ಹೊಸಬಂಡಿಯ ಮೇಲೆ ಇಟ್ಟರು?[12] ಇದೇ ರೀತಿಯಾಗಿ ಮಂಜೂಷವನ್ನು ಇಸ್ರಾಯೇಲಿಗೆ ತರಲಾಗಿತ್ತು ಎಂದು ಯಾರಾದರು ಹೇಳಿದ್ದರೋ?[13] ಅಥವಾ ಭಾರವಾದದ್ದನ್ನು ಈ ರೀತಿಯಾಗಿ ತರಬೇಕು ಎಂದು ಯಾರಾದರು ಪ್ರಯೋಗ ಮಾಡಿದ್ದರೋ? ದಾವೀದ ಮತ್ತು ಇತರರು ತಮ್ಮ ಕರ್ತವ್ಯದಲ್ಲಿ ಸೋತಿದ್ದರು. ಕೆಲಾತ್ಯರು ಮಾತ್ರ ಕೋಲುಗಳ ಸಹಾಯದಿಂದ ಅದನ್ನು ಹೊತ್ತು ಕೊಂಡು ಬರಬೇಕಿದ್ದ ವಿಷಯವನ್ನು ಮರೆತ್ತಿದ್ದರೋ ಅಥವಾ ಗ್ರಹಿಸಲಿಲ್ಲವೋ? ಅದರ ಪರಿಣಾಮ ಬಹು ಘೋರ ವಾಗಿತ್ತು.

"ಉಜ್ಜನೂ, ಅಹಿಯೋವನೂ ಬಂಡಿಯನ್ನು ಹೊಡೆದರು." ಎಂದು ಕಥೆಯು ಮುಂದುವರಿಯುತ್ತದೆ[14] (2 ಸಮುವೇಲ 6:3ಬಿ).

> ಗುಡ್ಡದ ಮೇಲೆ ವಾಸವಾಗಿದ್ದ ಅಬೀನಾದಾಬನ ಮನೆಯಿಂದ ತೆಗೆಯಲ್ಪಟ್ಟ ದೇವರ ಮಂಜೂಷದ ಮುಂದೆ ಅಹಿಯೋವನು ಹೋಗುತ್ತಿದ್ದನು. ದಾವೀದನೂ ಎಲ್ಲಾ ಇಸ್ರಾಯೇಲ್ಯರೂ ಕಿನ್ನರಿ, ಸ್ವರಮಂಡಲ, ದಮ್ಮಡಿ, ಝಲ್ಲರಿ, ತಾಳ ಇವುಗಳನ್ನು ಬಾರಿಸಿಕೊಂಡು ಪೂರ್ಣಾಸಕ್ತಿಯಿಂದ ಗೀತಗಳನ್ನು ಹಾಡುತ್ತಾ ಕರ್ತನ ಮುಂದೆ ನರ್ತನಮಾಡುತ್ತಾ ಹೋದರು (2 ಸಮುವೇಲ 6:4, 5).

ಬಂಡಿಯು ಒಂದು ಚಿಕ್ಕ ಎರಡು ಚಕ್ರದ ವಾಹನವಾಗಿತ್ತು. ಅದು ಸ್ಥಿರವಾದ ವಾಹನ ವಾಗಿರಲಿಲ್ಲ, ಈ ಚಿತ್ರವನ್ನು ಮನಸ್ಸಿನಲ್ಲಿ ಊಹೆ ಮಾಡಿಕೊಳ್ಳಿ.[15] ದೇವರ ಮಂಜೂಷವನ್ನು ಬಂಡಿಯ ಮೇಲೆ, ಇಟ್ಟು ಎತ್ತುಗಳ ಸಹಾಯದಿಂದ ಬೆಟ್ಟದಿಂದ ಇಳಿಸಿಕೊಂಡು ಬರುತ್ತಿದ್ದರು. ಅಹಿಯೋವನು ಬಂಡಿಗೆ ಮುಂದಾಗಿ ಇದ್ದನು. ಎಲ್ಲವೂ ಸರಿಯಾಗಿದೆ ಎಂದು ನೋಡಿ ಕೊಳ್ಳಲು ಉಜ್ಜನು ಅದರ ಬದಿಯಲ್ಲಿ ನಡೆಯುತ್ತಿದ್ದನು. ದಾವೀದನು ಅವನ ಮೂವತ್ತು ಸಾವಿರ ಜನರು ಅದರ ಮುಂದೆ ಕುಣಿಯುತ್ತಾ, ಹಾಡುತ್ತಾ, ಅರ್ಭಟಿಸುತ್ತಾ, ವಾದ್ಯಗಳನ್ನು ಬಾರಿಸುತ್ತಾ ಮುಂದುವರಿದಿದ್ದರು. ಇದು ಬಹಳ ಸಂತೋಷದ ಆಚರಣೆಯಾಗಿತ್ತು! ಆದರೆ ಇದು ದೇವರ ದೃಷ್ಟಿಯಲ್ಲಿ ಸರಿಯಾಗಿತ್ತೋ? ತಪ್ಪಾಗಿತ್ತೋ!

ಇದಕ್ಕಿದ್ದ ಹಾಗೆ, ಸಂಭ್ರಮವು ಸಂಪೂರ್ಣ ಸ್ಥಗಿತಗೊಂಡಿತು. ಆ ಬಂಡಿಯು ನಾಕೋ ನನ ಕಣಕ್ಕೆ ಬಂದಾಗ[16] ಎತ್ತುಗಳು ಮುಗ್ಗರಿಸಿ ಮಂಜೂಷವು ಜಾರಿ ಬೀಳುವ ಪರಿಸ್ಥಿತಿಗೆ ಬಂತು,

> ... ಉಜ್ಜನು ಕೈಚಾಚಿ ದೇವರ ಮಂಜೂಷವನ್ನು ಹಿಡಿದನು. ಆಗ ಕರ್ತನು ಉಜ್ಜನ ಮೇಲೆ ಕೋಪಗೊಂಡು ಈ ತಪ್ಪಿನ ಸಲವಾಗಿ ಅವನನ್ನು ಹತ ಮಾಡಿದನು; ಅವನು ಅಲ್ಲೇ ದೇವರ ಮಂಜೂಷದ ಬಳಿಯಲ್ಲಿ ಸತ್ತನು (2 ಸಮುವೇಲ 6:6, 7).

ನಾನು ಈ ಕಥೆಯನ್ನು ಕೆಲವು ಕಾಲೇಜಿನ ವಿದ್ಯಾರ್ಥಿಗಳು ಹಿಂದೆಂದು ಕೇಳೆದುದ್ದನ್ನು ಯೌವನಸ್ಥರಿಗೆ ಹೇಳಿದಾಗ, ಅವರು ಇದನ್ನು ಕೇಳಿ ಅವರು ಆಶ್ಚರ್ಯಪಟ್ಟರು. ದೇವರು ಮಂಜೂಷ ಬಿದ್ದು ಮುರಿದು ಹೋಗದಂತೆ ಅವನು ಈ ಕಾರ್ಯವನ್ನು ಮಾಡಿದನು. ಆದರೆ "ಯಾಕೆ ದೇವರು ಉಜ್ಜನನ್ನು ಕೊಂದನು?" ಎಂದು ಅವರು ತಿಳಿಯಬಯಸಿದರು. "ದೇವರ

ಈ ತಕ್ಷಣದ ನ್ಯಾಯ ತೀರ್ಪಿನ ಬಗ್ಗೆ!"[17] ನನ್ನ ವಿದ್ಯಾರ್ಥಿಗಳು ಪ್ರಶ್ನೆಯನ್ನು ಕೇಳುವದರಲ್ಲಿ ಮೊದಲಿಗರಾಗಲಿ, ಅಥವಾ ಕಡೆಯವರಾಗಲಿ ಆಗಿರಲಿಲ್ಲ. ಆದರೆ ದೇವರು ಅರಣ್ಯಕಾಂಡದ ಪುಸ್ತಕದಲ್ಲಿ ಏನನ್ನು ತಿಳಿಸಿದ್ದಾನೆ? ಕೆಹಾತ್ಯರು ಮಾತ್ರ ಇದನ್ನು ಚಿನ್ನದ ಕೋಲುಗಳ ಸಹಾಯದಿಂದ ಹೊರಬೇಕಿತ್ತು. ಇವರು ದೇವಸ್ಥಾನದ, *"ಸಾಮಾನುಗಳನ್ನು ಮುಟ್ಟಬಾರದು; ಮುಟ್ಟಿದರೆ ಸತ್ತಾರು"* (ಅರಣ್ಯಕಾಂಡ 4:15; ಒತ್ತಿ ಹೇಳಿದ್ದು ನನ್ನದು).

ಉಜ್ಜನ ವಿಷಯವು ನಮಗೆ ದಿಗ್ಭ್ರಮೆಗೊಳಿಸುತ್ತದೆ. ಯಾಕೆಂದರೆ ಮಾನಸಿಕವಾಗಿ ನಮ್ಮ ಮನಸ್ಸಿನಲ್ಲಿ ಉಜ್ಜನು ಇರುವನು. ನಾವು ದೇವರ ಸೇವೆಯನ್ನು ಮಾಡುವಾಗ, ಒಳ್ಳೆಯ ಉದ್ದೇಶವಿದ್ದರೆ ಸಾಕು ದೇವರು ನಾವು ಯಥಾರ್ಥವಾಗಿ ಮಾಡುವದನ್ನೆಲ್ಲಾ ಒಪ್ಪಿಕೊಳ್ಳುತ್ತಾನೆ ಎಂದು ತಿಳಿಯುತ್ತೇವೆ. ಇಲ್ಲ ಯಾರೂ ಸಹ ಉಜ್ಜನ ಯಥಾರ್ಥತೆಯನ್ನಾಗಲ್ಲಿ ಅಥವಾ ಅವನ ಉದ್ದೇಶವನ್ನಾಗಲಿ ಪ್ರಶ್ನಿಸುವದಿಲ್ಲ, ಆದಾಗ್ಯೂ ಅವನ ಮರಣವು ತಣ್ಣಗಾದ - ಕಲ್ಲಿನಂತೆ ಆವರಿಸಿತು.

ಈ ಆಪತ್ತಿನ ಪರಿಸ್ಥಿತಿಯಲ್ಲಿ ದಾವೀದನು, ತನ್ನ ಜನಾಂಗವನ್ನು ದೇವರ ಮನಸ್ಸಿನ ಕಡೆಗೆ ಸೆಳೆಯಲು ಪ್ರಯತ್ನಿಸುವಾಗ, ನಮ್ಮ ಅನುಕೂಲಕ್ಕೆ ತಕ್ಕಂತೆ ಆರಾಧನೆಯ ನಿಯಮಗಳನ್ನು ಬದಲಾಯಿಸಿಕೊಳ್ಳುವದು ದೇವರ ದೃಷ್ಟಿಯಲ್ಲಿ ಅಪರಾದವೇ ಎಂದು ದೇವರು ನೆನಪಿಸಿದನು. ಆರಾಧನೆ ವಿಷಯವು ಅವರಿಗೆ (ಮತ್ತು ನಮಗೂ) ಗಂಭೀರವಾದ ಕಾರ್ಯಬಾರವಾಗಿದೆ. ದೇವರ ಬಳಿಗೆ ನಾವುಗಳು ನಮ್ಮ ನಿಯಮದಂತೆ ಬಾರದೆ, ದೇವರ ನಿಯಮದ ಪ್ರಕಾರ ಬರುತ್ತೇವೆ. ನಾವು ಆತನ ಪ್ರಸನ್ನತೆಗೆ, ಅತಿ ಗೌರವದಿಂದಲೂ, ಪೂರ್ಣ ತಗ್ಗಿಸುವಿಕೆಯಿಂದಲೂ ಬರುವವರಾಗಿರಬೇಕು.[18]

ದಾವೀದನ ಪಾದದಲ್ಲಿ ಉಜ್ಜನು ಮರಣವನ್ನು ಹೊಂದಿದಾಗ, "ದಾವೀದನು ಮನಸ್ಸಿನಲ್ಲಿ ಹೋರಾಟದ *ಉದ್ವೇಗಕ್ಕೆ* ಒಳಗಾದನು. ಕರ್ತನು ಉಜ್ಜನನ್ನು ಮುರಿದುಬಿಟ್ಟದ್ದರಿಂದ ದಾವೀದನು ಉರಿಗೊಂಡನು" (2 ಸಮುವೇಲ 6:8; ಒತ್ತಿ ಹೇಳಿದ್ದು ನನ್ನದು). ದಾವೀದನ ಪ್ರತಿಕ್ರಿಯೆಯು, ಅಸಮಧಾನದಿಂದಲೂ ಆಶಾಭಂಗದಿಂದಲೂ ತುಂಬಿತು. ಆದರೂ ದಾವೀದನು ದೇವರಿಗೆ ಭಯಪಟ್ಟನು: "ಆ ದಿವಸ ದಾವೀದನು ದೇವರಿಗೆ *ಭಯಪಟ್ಟನು*" (2 ಸಮುವೇಲ 6:9ಎ; ಒತ್ತಿ ಹೇಳಿದ್ದು ನನ್ನದು). ಇದೇ ಮೊದಲ ಸಾರಿ ದಾವೀದನು ದೇವರಿಗೆ ಭಯಪಟ್ಟನು ಎಂದು ಗಮನಿಸುತ್ತೇವೆ. "ಆಗ ಅವನು ದೇವರ ಮಂಜೂಷವನ್ನು ನಾನಿರುವಲ್ಲಿಗೆ ತೆಗೆದುಕೊಂಡು ಹೋಗುವದು ಹೇಗೆ?" ಎಂದು ಅನಿಶ್ಚಿತತೆಯಿಂದ ಯೋಚಿಸಿ (2 ಸಮುವೇಲ 6:9ಬಿ). ಕರ್ತನ ಮಂಜೂಷವನ್ನು ಗತ್ ಊರಿನ ಓಬೇದೆದೋಮನ ಮನೆಗೆ ಕಳುಹಿಸಿ[19] ತಾನು ಯೆರೂಸಲೇಮಿಗೆ ತಲೆಯಾಡಿಸುತ್ತ ಹಿಂದಿರುಗಿದನು.

ನಾವು ಯಾಥಾರ್ಥವುಳ್ಳವರಾಗಿದ್ದರೆ, ಹೌದು ನಾವು "ಹೊಸಬಂಡಿಯನ್ನು" ನಿರ್ಮಿಸಿ ಕೊಂಡಿದ್ದೇವೆ ಎಂದು ಒಪ್ಪಿಕೊಳ್ಳಬೇಕು. ಇಷ್ಟವಿರಲಿ, ಇಷ್ಟವಿಲ್ಲದೆ ಹೋಗಲಿ ನಮ್ಮ ಆರಾಧನೆಯನ್ನು ದೇವರು ಸ್ವಿಕರಿಸಲೇ ಬೇಕು ಎಂದು ನಾವು ಬಯಸುತ್ತೇವೆ: ಸಮಯವಿದ್ದರೆ ಆರಾಧನೆಗಾಗಿ ಜನರು ನಿರ್ಮಿಸಿಕೊಂಡಿರುವ ಹೊಸ ಬಂಡಿಯ ಕುರಿತಾದ ಸಿದ್ಧಾಂಥವನ್ನು ಧ್ಯಾನ ಮಾಡೋಣ, "ಹೊಸ ಬಂಡಿ" ಅಂದರೆ ಆರಾಧನೆಯ ಕ್ರಮದಲ್ಲಿ ಧೂಪವನ್ನು ಸುಡುವುದು, ಆರಾಧನೆಯಲ್ಲಿ ಮೇಣದ ಬತ್ತಿಗಳನ್ನು ಉರಿಸುವುದು, ವಿಶೇಷ ಯಾಜಕ ವರ್ಗದ ಹಾಗೂ ಕ್ರೈಸ್ತ ಪಾದ್ರಿಗಳ ಆರಾಧನ ಕ್ರಮ ಕರ್ತನ ಮೇಜಿಗೆ ಬದಲಾಗಿ, ಸೇವೆ, ಅಪರೂಪವಾಗಿ ಕರ್ತನ ಬೋಜನವನ್ನು ಆಚರಿಸುವದು, ಕರ್ತನ ದಿವಸವನ್ನು ಹೊರತು ಪಡಿಸಿ ಕರ್ತನ ಬೋಜನ ಮಾಡುವದು, ಸ್ತ್ರೀಯರು ಸಾರ್ವಜನಿಕ ಆರಾಧನೆಯಲ್ಲಿ ಮುಖ್ಯ ಪಾಲು ತೆಗೆದುಕೊಳ್ಳುವುದು, ಆರಾಧನೆಯಲ್ಲಿ ವಾದ್ಯಗಳನ್ನು ಉಪಯೋಗಿಸುವುದು,[20] ಇನ್ನು ಮುಂತಾದದು.[21]

ಹೇಗೂ ಇದನ್ನು ಸಾಧ್ಯವಾದಷ್ಟು ವ್ಯಯಕ್ತಿವಾಗಿಯೂ, ಪ್ರಾಯೋಗಿಕವಾಗಿಯೂ[22]

ಅಳವಡಿಸಿಕೊಳ್ಳೋಣ. ದಾವೀದನಾಗಲೀ, ಆಕಾನಾಗಲೀ ದೇವರ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ, ಲೋಕದ ಒಡೆಯನಿಗೆ ನಾವು ಸೂಚಿಸುವ ಅಗೌರವಕ್ಕೆ ಹೊಸಬಂಡಿ ಸಂಕೇತವಾಗಿದೆ, ನಾವು ಅಗೌರವದ ಹೊಸ ಬಂಡಿಗಳನ್ನು ನಿರ್ಮಿಸಿಕೊಂಡಿದ್ದೇವೋ? ಅನೇಕಸಾರಿ ನಾವು ಹಗುರ ಮನೋಭಾವನೆಯಿಂದ ದೇವರ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇವೆ, ಹಾಡುತ್ತೇವೆ, ದೇವರ ವಾಕ್ಯವನ್ನು ಓದುತ್ತೇವೆ. ಕರ್ತನ ಮೇಜಿನಲ್ಲಿ ಪಾಲು ತೆಗೆದುಕೊಳ್ಳುತ್ತೇವೆ, ಉಜ್ಜನು ಪಾವಿತ್ರ್ಯಭಂಗದಿಂದ, ತನ್ನ ದೈಹೀಕ ಮರಣವನ್ನು ಅನುಭವಿಸಿದನು. ಅದರಲ್ಲಿ ಸಂದೇಹವೇ ಇಲ್ಲ; ಆದ್ದರಿಂದ ನಾವು ಸಹ ಆತ್ಮೀಕ ಜೀವನವನ್ನು ಕಳೆಯುವದು ಸಾಧ್ಯವಿದೆ.

> ... ಹೀಗಿರುವದರಿಂದ ಯಾವನಾದರೂ ಅಯೋಗ್ಯವಾಗಿ ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೆ ಆತನ ಪಾತ್ರೆಯಲ್ಲಿ ಪಾನ ಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹ ಮಾಡಿದವನಾಗಿರುವನು ... ಯಾಕಂದರೆ ಕರ್ತನ ದೇಹವೆಂದು ವಿವೇಚಿಸದೇ ತಿಂದು ಕುಡಿಯುವವನು ಹಾಗೆ ತಿಂದು ಕುಡಿಯುವದರಿಂದ ನ್ಯಾಯತೀರ್ಪಿಗೊಳಗಾಗುವನು. ಈ ಕಾರಣದಿಂದಲೇ ನಿಮ್ಮಲ್ಲಿ ಬಹುಮಂದಿ ಬಲಹೀನರೂ ರೋಗಿಗಳೂ ಆಗಿದ್ದಾರೆ, ಮತ್ತು ಅನೇಕರು ಸಾಯುತ್ತಾರೆ (1 ಕೊರಿಂಥ 11:27, 29, 30).

ಆದುದರಿಂದ ಉಜ್ಜನ ಮರಣ ಆಶ್ಚರ್ಯವಲ್ಲ, ದೇವರು ನಮ್ಮೆಲ್ಲರನ್ನು ಕೊಲ್ಲುವುದಿಲ್ಲ ಇದು ಆಶ್ಚರ್ಯ. ಆರಾಧನೆ ಗಂಭೀರವಾದ ವ್ಯವಹಾರ.[23]

## ವಿವರಗಳಿಗೆಗಾಗಿ ಇರುವ ಆಸಕ್ತಿ ಆರಾಧನೆಯ ಸಂತೋಷಕ್ಕೆ ಬರಲಾರವು (2 ಸಮುವೇಲ 6:12-19; 1 ಪೂರ್ವಕಾಲವೃತ್ತಾಂತ 15:1-16:3, 7-36, 43)

ಇದೇ ರೀತಿ ಇರಬೇಕು ಅನ್ನುವ "ಕೆಲವು ನಿಯಮಗಳು" ಸ್ವಾಭಾವಿಕವಾಗಿ, ಧರ್ಮವನ್ನು ಬಂಜೆಯನ್ನಾಗಿ ಮಾಡುತ್ತದೆ. ನಿಯಮಗಳ "ಅಚ್ಚುಕಟ್ಟಾದ ಮುದ್ರಣವು" ವ್ಯಯಕ್ತಿಕವಾಗಿ ನಕಾರಾತ್ಮದ ಮನಸ್ಸಿನ ಕಡೆಗೆ ಕೊಂಡೊಯ್ಯುತ್ತದೆ. ಬೈಬಲಿನಲ್ಲಿ ಇರುವ ಕೆಲವು ನಿಯಮಗಳನ್ನು ತಿಳಿದು ಅಥವಾ ತಿಳಿಯದೆ "ಸ್ವಯಂಪ್ರೇರಿತರಾಗಿ" ಆರಾಧಿಸುವಂಥದೇ, ಆರಾಧನೆಗೆ ಸಂತೋಷದ ಮಾರ್ಗವಾಗಿರುತ್ತದೆ. ಅಂತ್ಯದಲ್ಲಿ, ಮಂಜೂಷವನ್ನು ಯೆರೂಸಲೇಮಿಗೆ ತೆಗೆದುಕೊಂಡು ಹೋಗುವ ಕಾರ್ಯಕ್ಕೆ ಈ ಮೇಲಿನ ಮಾತು ಸತ್ಯವಲ್ಲ.

ದಾವೀದನು ಓಬೇದೆದೋಮನ ಮನೆಯಲ್ಲಿ ಮಂಜೂಷವನ್ನು ಇರಿಸಿ ಮೂರು ತಿಂಗಳುಗಳು ಕಳೆದವು.[24] ಈ ಅವಧಿಯಲ್ಲಿ ದಾವೀದನು ಅರಮನೆಯನ್ನು ಕಟ್ಟುವದರಲ್ಲಿಯೂ; ಕುಟುಂಬವನ್ನು ಅಭಿವೃದ್ಧಿಪಡಿಸುವದರಲ್ಲಿಯೂ; ಫಿಲಿಷ್ಟಿಯರ ಮೇಲೆ ಯುದ್ಧ ಮಾಡುವದಲ್ಲಿಯೂ ಕಾರ್ಯನಿರತನಾಗಿದ್ದನು.[25]

ಮೂರು ತಿಂಗಳುಗಳ ನಂತರ, ಕರ್ತನು ಹೀಗೆ ತನ್ನ ಮಂಜೂಷದ ದೆಸೆಯಿಂದ ಓಬೇದೆದೋಮನನ್ನು ಅವನಿರುವದೆಲ್ಲವನ್ನು ಆಶೀರ್ವದಿಸಿದ್ದಾನೆಂಬ "ವರ್ತಮಾನವು ದಾವೀದನಿಗೆ ತಿಳಿದು ಬಂತು" (2 ಸಮುವೇಲ 6:12ಎ). ಮತ್ತು ಅದೇ ಅವಧಿಯಲ್ಲಿ ದೇವರು ದಾವೀದನನ್ನು ಸಹ ಆಶೀರ್ವದಿಸಿದಾಗ, ಈಗ ದೇವರ ಕೋಪವು ಶಮನವಾಯಿತೆಂದು ತಿಳಿದು, ಪುನ ದೇವರ ಮಂಜೂಷವನ್ನು ಯೆರೂಸಲೇಮಿಗೆ ತರಲು ಪ್ರಯತ್ನಿಸಿದನು.

ಆದರೆ ಈ ಸಮಯದಲ್ಲಿ, ದಾವೀದನು ಸರಿಯಾದ ಯೋಜನೆಯನ್ನು ಮಾಡಿಕೊಂಡು ಸಿದ್ಧನಾಗಿದ್ದನು. ಮೊದಲನೆಯದಾಗಿ ಮಂಜೂಷವನ್ನು ಕ್ಷೇಮವಾಗಿ ಇಡಲು ಒಂದು ವಿಶೇಷವಾದ ಸ್ಥಳವನ್ನು ತನ್ನ ಪಟ್ಟಣವಾದ ಯೆರೂಸಲೇಮಿನಲ್ಲಿ ಸಿದ್ಧಪಡಿಸಿದನು.[26] ಎರಡನೆಯದಾಗಿ ತನ್ನ ಯಥಾರ್ಥ ಕಾರ್ಯವನ್ನು ಮಾಡಿ, ವಿಶೇಷ ಜನರನ್ನೂ ಸಹ

ಸಿದ್ಧಪಡಿಸಿದನು. “ತನ್ನ ಕುಟುಂಬದ ಹಳೆಯ ಬೈಬಲನ್ನು ತೆರೆದು” ಮಂಜೂಷದ ಬಗ್ಗೆಯೂ, ವಿಶೇಷವಾಗಿ ಮಂಜೂಷವನ್ನು ಹೊತ್ತು ಸಾಗಿಸುವ ಕ್ರಮದ ಬಗ್ಗೆಯೂ, ಮೋಶೆಯು ನೀಡಿದ ವಿವರಗಳನ್ನು ಪರಿಶೀಲಿಸಿದನು. ವಿಮೋಚನಕಾಂಡ ಅಧ್ಯಾಯ 25, ಅರಣ್ಯಕಾಂಡ 4 ಮತ್ತು 7, ಧರ್ಮೋಪ ದೇಶಕಾಂಡ 10ರಲ್ಲಿ ಲೇವಿಯ ಕುಲದವರಾದ ಕೇಹಾತ್ಯರು ಕೋಲುಗಳ ಸಹಾಯದಿಂದ, ಅವರ ಹೆಗಲುಗಳ ಮೇಲೆ, *ದೇವರ* ಮಂಜೂಷವನ್ನು ಹೊಯ್ಯಬೇಕು ಅನ್ನುವ ವಿಷಯವನ್ನು ಕಂಡುಹಿಡಿದನು, ಈ ಸಾರಿ ದೇವರ ಮಾರ್ಗ ದರ್ಶನದಂತೆಯೇ ಕಾರ್ಯನಿರ್ವಹಿಸಲು ನಿರ್ಧರಿಸಿದನು.

2 ಸಮುವೇಲ 6:12ರ ಮುಂದಿನ ಭಾಗ ಈ ರೀತಿಯಾಗಿ ತಿಳಿಸುತ್ತದೆ, “ದಾವೀದನಿಗೆ ಮುಟ್ಟಿದಾಗ ಅವನು ಹೋಗಿ ಓಬೇದೆದೋಮನ ಮನೆಯಲ್ಲಿದ್ದ ದೇವರ ಮಂಜೂಷವನ್ನು ಉತ್ಸವದಿಂದ, ದಾವೀದ ನಗರಕ್ಕೆ ತಂದನು.” 1 ಪೂರ್ವಕಾಲವೃತ್ತಾಂತ 15ರಲ್ಲಿ ಕಾಣುವ ವಿವರ: “ಲೇವಿಯರು ಹೊರತಾಗಿ ಯಾರೂ ದೇವ ಮಂಜೂಷವನ್ನು ಹೊರಬಾರದು; ಅದನ್ನು ಹೊರುವದಕ್ಕೂ ಸದಾಕಾಲ ತನ್ನ ಸೇವೆ ಮಾಡುವದಕ್ಕೂ ಕರ್ತನು ಅವರನ್ನೇ ಆರಿಸಿಕೊಂಡಿದ್ದಾನೆ” (ವಚನ 2) ಎಂದು ಹೇಳಿ ಯಾಜಕರ ನಾಯಕರುಗಳಿಗೂ ಲೇವಿ ಯರಿಗೂ ಪ್ರಬೋಧನೆಯನ್ನು ಬೋಧಿಸಿದನು:

> ... ಲೇವಿಯರಲ್ಲಿ ಗೋತ್ರ ಪ್ರಧಾನರಾದ ನೀವೂ ನಿಮ್ಮ ಸಹೋದರರೂ ನಿಮ್ಮನ್ನು ಶುದ್ಧಿಪಡಿಸಿಕೊಂಡು ಇಸ್ರಾಯೇಲ್ ದೇವರಾದ ಕರ್ತನ ಮಂಜೂಷವನ್ನು ನಾನು ಸಿದ್ಧಮಾಡಿರುವ ಸ್ಥಳಕ್ಕೆ ತೆಗೆದುಕೊಂಡು ಬನ್ನಿರಿ. ನೀವು ಮೊದಲನೆಯ ಸಾರಿ ಇರಲಿಲ್ಲ ವಾದದ್ದರಿಂದ ನಮ್ಮ ದೇವರಾದ ಕರ್ತನು ತನ್ನ ಸನ್ನಿಧಿಗೆ ಧರ್ಮವಿಧಿ ವಿರೋಧವಾಗಿ ಬಂದ ನಮ್ಮಲ್ಲಿ ಒಬ್ಬನನ್ನು ಸಂಹರಿಸಿದನಷ್ಟೆ (1 ಪೂರ್ವಕಾಲವೃತ್ತಾಂತ 15:12, 13).

“ಧರ್ಮವಿಧಿವಿರೋಧಿ” ಎಂಬ ಪದವನ್ನು ಅವಲೋಕಿಸಿ ಇನ್ನೊಂದು ವಾಕ್ಯದಲ್ಲಿ, ನಾವು ಆತನ “ವಿಧಿಗಳನ್ನು” ಪಾಲಿಸದೇ ಇದ್ದದ್ದರಿಂದ “ದೇವರು ನಮ್ಮ ಆರಾಧನೆಯನ್ನು ಆಶೀರ್ವದಿಸಲಿಲ್ಲ. ಐನೂರು ವರ್ಷಗಳ ಹಿಂದೆ ದೇವರು ಮೋಶೆಯ ಮೂಲಕ ನೀಡಿದ ಧರ್ಮವಿಧಿ ವಿಧಾನಗಳ ವಿಷಯವನ್ನು ದಾವೀದನು ಮಾತನಾಡಿದನು” - ಅದು ಆ ದಿವಸದಲ್ಲಿಯೇ ನೀಡಿದ ಅಪ್ಪಣೆಯಂತಿತ್ತು “ನಿಮ್ಮ ಸಮಯಕ್ಕೆ ಅನುಗುಣವಾಗಿ” ದೇವರ ವಿಧಿಗಳನ್ನು ಬದಲಾಯಿಸಬಹುದು ಎಂದು ಕೆಲವರು ಯೋಚಿಸುತ್ತಾರೆ. ಆದರೆ ದೇವರು ಮಾತ್ರ ತನ್ನ ಧರ್ಮವಿಧಿ ವಿಧಾನಗಳನ್ನು ಬದಲಾಯಿಸಲು ಹಕ್ಕುದಾರನಾಗಿದ್ದಾನೆ ಎಂದು ದಾವೀದನು ತಿಳಿದನು.

ನಮಗೆ ಯಾವ ರೀತಿಯಾದ ಹಕ್ಕುಗಳಿಲ್ಲ. ಹೊಸ ಒಡಂಬಡಿಕೆಯಲ್ಲಿ, ಯೇಸು ಆರಾಧನೆಗೆ ಅನುಕೂಲವಾಗುವ ಎರಡು ಸಂತಿಗಳನ್ನು ತಿಳಿಸಿದ್ದಾನೆ. “ದೇವರು ಆತ್ಮ ಸ್ವರೂಪನು,” “ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು” (ಯೋಹಾನ 4:24). ನಾವು ದೇವರ ವಾಕ್ಯಕ್ಕೆ ಅನುಗುಣವಾಗಿ ಆರಾಧಿಸಬೇಕು (ಯೋಹಾನ 17:17). ಸರಿಯಾದ ಮನೋಭಾವನೆಯಿಂದ ಆರಾಧನೆ ಯನ್ನು ಸಲ್ಲಿಸಬೇಕು (ಆತ್ಮದಿಂದ) ಆರಾಧಿಸುವುದು ನಿಗಧಿಪಡಿಲಾಗಿದೆ. ಆರಾಧನೆಯ ಕ್ರಮವನ್ನು ದೇವರು ನಮಗೆ ಅನುಗ್ರಹಿಸಿದ್ದಾನೆ. ಸರಿಯಾದ ಸಂಗತಿಯನ್ನು ಸರಿಯಾದ ಸಮಯದಲ್ಲಿಯೇ ಮಾಡಬೇಕು.

ಈ ಸತ್ಯವು ಕ್ರಿಸ್ತನ ಸಭೆಗಳಲ್ಲಿ, ಅನುಕರಿಸಬೇಕಾದ ಆರಾಧನೆಯ ಕ್ರಮದ ಬಗ್ಗೆ ವಿವರಣೆಯನ್ನು ನೀಡುತ್ತದೆ. ಯಾಕೆ ನಾವು ಕರ್ತನ ಬೋಜನವನ್ನು ವಾರದ ಮೊದಲನೆಯ ದಿನದಲ್ಲಿ ಆಚರಿಸುತ್ತೇವೆ, ಯಾಕೆ ವಾರದ ಮೊದಲನೆಯ ದಿನ? ಯಾಕೆ ಪುರುಷರು ಮಾತ್ರ ಬೋಧಿಸುತ್ತಾರೆ. ಮತ್ತು ಆರಾಧನೆಯನ್ನು ನಡೆಸಿಕೊಡುತ್ತಾರೆ? ಯಾಕೆ ನಾವು ವಾದ್ಯಗಳಿಲ್ಲದೆ

ಸ್ವರದಿಂದ ಮಾತ್ರ ಹಾಡುತ್ತೇವೆ? ಯಾಕೆಂದರೆ ಅದನ್ನೇ ದೇವರು ಹೊಸ ಒಡಂಬಡಿಕೆಯಲ್ಲಿ ನೇಮಿಸಿರುವುದು, "ಆದರೆ ಕೆಲವರು ಹೇಳಬಹುದು. ಅದು ಬಹಳ ಸಣ್ಣ ವಿಷಯ, ದೇವರು ಇಂಥ ಚಿಕ್ಕ ವಿಷಯವನ್ನು ಗಂಭೀರವಾಗಿ ಪರಿಗಣಿಸುವದಿಲ್ಲ." 2 ಸಮುವೇಲ 6 ಮತ್ತು 1 ಪೂರ್ವಕಾಲವೃತ್ತಾಂತ 13-15ರಲ್ಲಿ ಇರುವಂಥ ವಿಷಯ ದೇವರು ಇಂಥ ಚಿಕ್ಕ ಲಕ್ಷ್ಯಕ್ಕೆ ಬಾರದ ವಿಷಯಗಳನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಾನೆ. "ಬಂಗಾರದ ಬಳೆಗಳು, ಹೊರುವ ಕೋಲುಗಳು ಮಂಜೂಷದ ಮುಚ್ಚಳ," ಅದನ್ನು ಹೊರ ಬೇಕಾಗಿರುವವರ ವಿಷಯದಲ್ಲಿ ದೇವರು, ಆಳವಾಗಿ ಯೋಚಿಸುವಂತೆ, ನಾವು ಸಹ ಯೋಚಿಸುವುದು ಉತ್ತಮ ವಾಗಿದೆ!

"ಆರಾಧನೆಯ ಕ್ರಮದ ವಿವರಗಳು ನೇರವಾಗಿ ಸಂತೋಷದ ಆರಾಧನೆಗೆ ಮಾರಕವಾ ಗಿದೆಯೋ?" ಕಥೆಯನ್ನು ಉತ್ತರದೊಂದಿಗೆ ಪೂರ್ಣಮಾಡೋಣ. ಎಲ್ಲವೂ ಸಿದ್ಧವಾದ ಮೇಲೆ ...

> ... ಯಾಜಕರೂ ಲೇವಿಯರೂ ಇಸ್ರಾಯೇಲ್ ದೇವರಾದ ಕರ್ತನ ಮಂಜೂಷವನ್ನು ತರುವದಕ್ಕೋಸ್ಕರ ತಮ್ಮನ್ನು ಶುದ್ಧಿಪಡಿಸಿಕೊಂಡರು. ಮೋಶೆಯ ಮುಖಾಂತರವಾಗಿ ಕೊಡಲ್ಪಟ್ಟ ಯೆಹೋವನ ಅಜ್ಞಾನುಸಾರವಾಗಿ ಲೇವಿಯರು ದೇವ ಮಂಜೂಷಕ್ಕೆ ಕೋಲು ಗಳನ್ನು ಸಿಕ್ಕಿಸಿ ಅದನ್ನು ಹೆಗಲಿನ ಮೇಲೆ ಹೊತ್ತು ಕೊಂಡರು (1 ಪೂರ್ವಕಾಲವೃತ್ತಾಂತ 15:14, 15).

ಮನೋಹರವಾದ ವಿವರಣೆಯನ್ನು 2 ಸಮುವೇಲ 6:13ರಲ್ಲಿ ನೋಡುತ್ತೇವೆ: "ಕರ್ತನ ಮಂಜೂಷವನ್ನು ಹೊತ್ತವರು ಆರು ಹೆಜ್ಜೆ ನಡೆದನಂತರ ದಾವೀದನು ಒಂದು ಎತ್ತನ್ನೂ ಕೊಬ್ಬಿದ ಕರುವನ್ನೂ ಯಜ್ಞ ಮಾಡಿದನು." ಯಾರಿಗೆ ಗೊತ್ತು ಈ ಎರಡನೆಯ ಕಾರ್ಯವು ಮೊದಲನೆಯ ಕಾರ್ಯದಂತೆ ಅಂತ್ಯವಾಗುತ್ತಿತ್ತೊ? ಅಥವ ಸಫಲವಾಗುತ್ತಿತ್ತೋ? ಎನ್ನುವ ಯೋಚನೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳಿ. ಒಂದು ವೇಳೆ ಮಂಜೂಷವನ್ನು ಹೊರುವದಕ್ಕೆ ನನ್ನನ್ನು ಆಯ್ಕೆ ಮಾಡಿಕೊಂಡಿದ್ದರೆ, ಇದು ಒಂದು ನಂಬಲು ಸತ್ಯವಾದಂಥ, ಗೌರವ ಎಂದು "ನಾನು ಹೇಳುವದಕ್ಕೆ ಸಾಧ್ಯವಿತ್ತೋ, ಉಜ್ಜನನ್ನು ಮರಣ ಕೀಡು ಮಾಡಿದ ಆ ಪೆಟ್ಟಿಗೆಯನ್ನು ನಾನು ಹೊರಲು ಸಾಧ್ಯವಿತ್ತೋ? ಒಂದು ವೇಳೆ ನೀನು ಇದನ್ನು ತಮಾಷೆ ಎಂದು ತಿಳಿಯಬಹುದು!"

ಮಂಜೂಷವನ್ನು ಹೊರಲು ಮುಂದಾದವರ ಮುಖದಲ್ಲಿ ಬೆವರು ಸುರಿಯುತ್ತಿತ್ತು? ಅದನ್ನು ನೀನು ಕಾಣುವದಿಲ್ಲವೋ. ಅವರು ಅದನ್ನು ತಮ್ಮ ಬೆರಳುಗಳಿಂದ ಕೋಲನ್ನು ಮುಟ್ಟಲು ಮುಂದಾಗಿ, ಹಿಂದಕ್ಕೆ ಸರಿದರು ಆದರೆ ಏನು ಸಂಭವಿಸಲಿಲ್ಲ. ಅವರು ನಡುಗುತ್ತ ತಮ್ಮನ್ನು ಸಿದ್ಧಪಡಿಸಿಕೊಂಡು, ಬಹಳ ಎಚ್ಚರದಿಂದ ಅದನ್ನು ಎತ್ತಿ ತಮ್ಮ ಭುಜಗಳ ಮೇಲೆ ಇಟ್ಟುಕೊಂಡರು, ಯಾವ ಅಪಾಯವು ಉಂಟಾಗಲಿಲ್ಲ, ನಂತರ ಮತ್ತು ಎಚ್ಚರವಹಿಸಿ, ಪಾದವನ್ನು ಎತ್ತಿ ಮೊದಲ ಹೆಜ್ಜೆಯನ್ನಿಟ್ಟರು, ಇದು ಒಂದು ವೇಳೆ ಕೊನೆಯ ಹೆಜ್ಜೆ ... ಎಂಬುದಾಗಿ ತಿಳಿದು ಮತ್ತೊಂದು ಹೆಜ್ಜೆಯನ್ನಿಟ್ಟರು ... ನಂತರ ಮೂರನೆಯದು ... ನಾಲ್ಕನೇ ಯದು ... ಐದನೆಯದು ... ಆರನೇಯದು. ಆದಾಗ್ಯೂ ಅವರು ಇನ್ನೂ ಬದುಕಿದ್ದರು. ಅವರು ನಿಧಾನವಾಗಿ ಮಂಜೂಷವನ್ನು ಇಳಿಸಿ ನಗುಮುಖದಿಂದ ನಿಟ್ಟುಸಿರುಬಿಟ್ಟರು. ಈ ಸಾರಿ ಎಲ್ಲವೂ ಸರಿಯಾಗಿತ್ತು!

ದಾವೀದನು, ಮಂಜೂಷವನ್ನು ಇಡುವದಕ್ಕಾಗಿ, ಸ್ಥಳವನ್ನು ಹಾಗೂ ಹೋರು ವದಕ್ಕೆ ಜನರನ್ನು ಸಿದ್ಧಮಾಡಿದ್ದು ಮಾತ್ರವಲ್ಲದೆ; ಯಜ್ಞ ಮಾಡುವದಕ್ಕೂ ಸಕಲ ಸಿದ್ಧತೆಯನ್ನು ಮಾಡಿಕೊಂಡಿದ್ದನು. "ಆ ನಿರ್ದಿಷ್ಟವಾದ ಸ್ಥಳದಲ್ಲಿ ಅವನು ಎತ್ತನ್ನೂ ಹಾಗೂ ಕೊಬ್ಬಿದ ಕರುವನ್ನು, ಯಜ್ಞ ಮಾಡಿದನು" (2 ಸಮುವೇಲ 6:13; NIV). ದೇವರು ಈ ಕಾರ್ಯದ

ಮುಖಾಂತರ ಅವರನ್ನು ನೆನಪಿಸಿಕೊಂಡನು ಮತ್ತು ದೇವರು ಅವರೊಂದಿಗಿದ್ದು ಅವರ ಜನಾಂಗದ ಮಧ್ಯದಲ್ಲಿ ಅವರ ಆದ್ಯ ಕರ್ತವ್ಯವನ್ನು ಪುನ ಸ್ಥಾಪಿಸಿದನೆಂದು ದಾವೀದನ ಯಜಮಾನನು ತಾವು ಯಜ್ಞವನ್ನು ಸಮರ್ಪಿಸಿದರು: "ಅದನ್ನು ಹೊತ್ತ ಲೇವಿಯರಿಗೆ ದೇವರ ಸಹಾಯ ದೊರೆತದ್ದರಿಂದ ಏಳು ಹೋರಿಗಳನ್ನೂ ಏಳು ಟಗರುಗಳನ್ನೂ ಯಜ್ಞ ಮಾಡಿದರು" (1 ಪೂರ್ವಕಾಲವೃತ್ತಾಂತ 15:26).

ಈಗ ದೇವರೊಂದಿಗಿನ ಸಂಬಂಧದಲ್ಲಿ ಎಲ್ಲವೂ ಸರಿಯಾಯಿತು. ಅವರ ಹೃದಯದಲ್ಲಿ ದೇವರಿಗೆ ಘನ ಉಂಟಾದದ್ದು ಮಾತ್ರವಲ್ಲದೆ ದೇವರ ಗಂಭೀರವಾದ ಚಿತ್ತವನ್ನು ನೆರವೇರಿ ಸುವದರಲ್ಲಿಯೂ ದೇವರನ್ನು ಮೆಚ್ಚಿಸಿದ್ದರು. ಪಾಪದ ಭ್ರಾಂತಿಯ ಪರಿಸ್ಥಿತಿಯಲ್ಲಿದ್ದ ದಾವೀದ ನಿಗೆ ಉಪಶಮನವಾಯಿತು.

> ದಾವೀದನು ನಾರಿನ ಏಫೋದನ್ನು[27] ಧರಿಸಿಕೊಂಡವನಾಗಿ ಕರ್ತನ ಸನ್ನಿಧಿಯಲ್ಲಿ ಪೂರ್ಣಸಕ್ತಿಯಿಂದ ಕುಣಿದಾಡಿದನು, ... (2 ಸಮುವೇಲ 6:14).

> ಹೀಗೆ ಎಲ್ಲಾ ಇಸ್ರಾಯೇಲ್ಯರು ಆರ್ಭಟಿಸುತ್ತಾ ಕೊಂಬು ತುತೂರಿಗಳನ್ನು ಗಟ್ಟಿಯಾಗಿ ಊದುತ್ತಾ ತಾಳಹೊಡೆಯುತ್ತಾ ಕಿನ್ನರಿಸ್ವರಮಂಡಲಗಳನ್ನು ಬಾರಿಸುತ್ತಾ ಕರ್ತನ ನಿಬಂಧನ ಮಂಜೂಷವನ್ನು ತಂದರು (1 ಪೂರ್ವಕಾಲ ವೃತ್ತಾಂತ 15:28).

ದೇವರ ಮಂಜೂಷವೂ ಯೆರೂಸಲೇಮ ಪಟ್ಟಣವನ್ನು ಪ್ರದೇಶಿಸಿದಾಗ, ಅವರಿಗೆ ಉತ್ಸಾಹದ ಸಂತೋಷವುಂಟಾಯಿತು! ನಿಜವಾದ ಇಸ್ರಾಯೇಲ್ಯರ ಅರಸನು ಯಾರೂ ಎಂದು ಎಲ್ಲರೂ ತಿಳಿಯಬೇಕೆಂದು ದಾವೀದನು ಅಪೇಕ್ಷೆಪಟ್ಟನು. ದಾವೀದನು ರಾಜ ವಸ್ತ್ರವನ್ನು ಧರಿಸಿ, ರಾಜಗಾಂಭೀರ್ಯದಿಂದ ನಡೆಯದೆ,[28] ಅವನ ಬಿಳಿಯ ನಾರಿನ ಎಫೋದನ್ನು ಧರಿಸಿಕೊಂಡನು ಮಂಜೂಷದ ಮುಂದೆ ದೇವರನ್ನು ಸ್ತುತಿಸುತ್ತಾ ಕುಣಿದಾಡಿದನು. ಯೆರೂಸಲೇಮನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಸಂದರ್ಭದಲ್ಲಿ ಯಾವುದೇ ಸೈನ್ಯದ ಕವಾಯಿತು ಅವನನ್ನು ಸಂಧಿಸಲಿಲ್ಲ. ಆದರೆ ಯೆಹೋವ ನಿಗೆ ಜಯದ ಆಹ್ವಾನ ನೀಡಿದನು!

ಅವರು ದಾವೀದನು ಮಂಜೂಷವನ್ನೀಡಲು, ಸಿದ್ಧಪಡಿಸಿದ ಗುಡಾರದ ಬಳಿಗೆ ಬಂದು, ಮಂಜೂಷವನ್ನು ಗೌರವಾಧಾರಗಳಿಂದ ಗುಡಾರದಲ್ಲಿ ಇಟ್ಟರು. ನಂತರ ದಾವೀ ದನು ತನ್ನ ಹಾಗೂ ಜನರ ಪಾಪಗಳಿಗಾಗಿ ("ಸಮೂಹ ಅಥವಾ ಅನ್ಯೋನ್ಯತೆ"; NIV) ದೇವರಿಗೂ ಮತ್ತು ಜನರಿಗೂ ಮಧ್ಯದಲ್ಲಿ ಉಂಟಾದ ಸಮಾಧಾನದ ಒಡಂಬಡಿಕೆಗಾಗಿ ದೇವರಿಗೆ ಯಜ್ಞ ಹೋಮವನ್ನು ಸಮಾದಾನದ ಯಜ್ಞವನ್ನು ಸಮರ್ಪಿಸಿ ಉತ್ಸವವನ್ನು ಮಾಡಿದನು. ಈ ಒಂದು ಸನ್ನಿವೇಷದಲ್ಲಿ ದಾವೀದನು, ದೇವರ ಗೌರವಾರ್ತವಾಗಿ, ಆತನ ಸಾರ್ವಬೌಮತ್ವಕ್ಕಾಗಿ, ಆತನ ಪರಾಕ್ರಮಕ್ಕಾಗಿ, ಮತ್ತು ಆತನ ಮಹಿಮೆ ಮತ್ತು ದೇವರ ಶಕ್ತಿಯ ಕುರಿತಾಗಿ ಒಂದು ಕೀರ್ತನೆಯನ್ನು ರಚಿಸಿದನು.[29] ಆ ಮಾರ್ಪಡಿಸುವ ಹಾಡು ಈ ರೀತಿಯಿದೆ. "ಇಸ್ರಾಯಲ್ ದೇವರಾದ ಕರ್ತನಿಗೆ ಯುಗ ಯುಗಾಂತರಗಳ ವರೆಗೂ ಕೊಂಡಾಟವಾಗಲಿ" (1 ಪೂರ್ವಕಾಲವೃತ್ತಾಂತ 16:36ಎ). "ಅವರು ಹೀಗೆ ಹಾಡಿದ್ದಕ್ಕೆ ಸರ್ವಜನರೂ ಆಮೆನ್ ಎಂದು ಕರ್ತನನ್ನು ಸ್ತುತಿಸಿದರು" (ವಚನ 36ಬಿ). ನಂತರ ದಾವೀದನು ಸೇನಾಧೀಶ್ವರನಾದ "ಕರ್ತನ ಹೆಸರಿನಿಂದ ಎಲ್ಲರನ್ನೂ ಆಶೀರ್ವದಿಸಿ" (2 ಸಮುವೇಲ 6:18). ನೆರದುಬಂದ ಇಸ್ರಾಯೇಲ್ಯರಲ್ಲಿ ಪ್ರತಿ ಕುಟುಂಬಕ್ಕೂ ಆಹಾರ ಸರಬ ರಾಜು ಮಾಡಿದನು, ದೇವರು ತನ್ನ ಜನರೊಂದಗೆ ಪುನ ವಾಸ ಮಾಡಿದನೆಂದು ತಿಳಿದು ಸಂತೋಷದಿಂದ ತಮ್ಮ ಮನೆಗಳಿಗೆ ಹಿಂದಿರುಗಿದರು.

ಧರ್ಮಶಾಸ್ತ್ರದ ಶಿಸ್ತಿನ ನೀತಿ ನಿಯಮಗಳು ಅವನನ್ನು, ಅವನ ಸಂಗಡ ಆರಾಧಿಸುತ್ತಿದ್ದ,

ಇತರರ ಸಂತೋಷವನ್ನು ನಾಶಮಾಡಿದವೋ? 2 ಸಮುವೇಲ 6ರ ಮುಂದಿನ ಭಾಗವನ್ನು 1 ಪೂರ್ವಕಾಲ ವೃತ್ತಾಂತ 15; 16, ಜೊತೆಯಲ್ಲಿ ಓದುವಾಗ, ದೊರಕುವ ಉತ್ತರ ಆರಾಧನೆಯ ವಿವರಗಳಿಗೆ ಹೆಚ್ಚು ಲಕ್ಷಕೊಡುವಂಥದ್ದು ಅವರ ಸಂತೋಷವನ್ನು ನಾಶಮಾಡಲಿಲ್ಲ, ಎರಡು ಸಾರಿಯು ಸಂಭ್ರೊಮೋತ್ಸವವನ್ನು ಆಚರಿಸಿದರು. ಆದರೆ ದೇವರ ಕ್ರಮವನ್ನು ಉಲ್ಲಂಘಿಸಿದ್ಧರಿಂದ, ಮೊದಲನೆಯ ಆಚರಣೆ "ದುಖದಲ್ಲಿ ಅಂತ್ಯವಾಯಿತು."[30] ದೇವರ ಕ್ರಮವನ್ನು ಅವರು ನೆರವೇರಿ ಸಿದ್ಧರಿಂದ ಎರಡನೇಯ ಸಂಭ್ರೊಮೋತ್ಸಹವು ಉತ್ಸಾಹದಲ್ಲಿ ಅಂತ್ಯವಾಯಿತು.

ಯಾವ ನಮೂನೆ ಇರಬೇಕೆಂಬುದು, ಅತಿರೇಖವಾಗಬಾರದು, ಆತ್ಮದಲ್ಲಿಯೂ ಸತ್ಯದಲ್ಲಿಯೂ, ಆರಾಧಿಸುದಕ್ಕೆ ಒಪ್ಪಿಸಿಕೊಡುವವರಿಗೆ, ಈ ರೀತಿಯಾಗುವದಿಲ್ಲ. ದೇವರ "ಕ್ರಮಗಳಿಗೆ" ಅಂಟಿಕೊಳ್ಳುವದು ಮನುಷ್ಯನಿಗೆ ಸಂಕೋಚದಿಂದ ಬಿಡುಗಡೆಯಾದ ಅನುಭವವನ್ನು ನೀಡುತ್ತದೆ. ನಿನ್ನ ಆರಾಧನೆಯು, ದೇವರನ್ನು ಮೆಚ್ಚಿಸಿದೆ ಎಂದು, ನಿನ್ನ ಹೃದಯದಲ್ಲಿ ತಿಳಿದು ಬಂದರೆ, ನೀನು ದೇವರನ್ನು ಆರಾಧಿಸಲು ಸ್ವತಂತ್ರನಾಗಿರುವಿ!

## ಅರ್ಥಪೂರ್ಣವಾದ ಆರಾಧನೆಗೆ ಸಿದ್ಧತೆಯು ಅವಶ್ಯ
## (1 ಪೂರ್ವಕಾಲವೃತ್ತಾಂತ 15:2-24; 16:1-7, 37-42)

2 ಸಮುವೇಲ 6 ಮತ್ತು 1 ಪೂರ್ವಕಾಲವೃತ್ತಾಂತ 15; 16ನ್ನು ಬಿಟ್ಟುಹೋಗು ವದಕ್ಕಿಂತ ಮೊದಲು, ಎರಡು ಪ್ರಾಮುಖ್ಯವಾದ, ಸತ್ಯಗಳನ್ನು ಒತ್ತಿ ಹೇಳುತ್ತೇನೆ. ಮೊದಲನೆಯದಾಗಿ ಅರ್ಥಪೂರ್ಣವಾದ ಆರಾಧನೆಗೆ ಹೃದಯ - ಮತ್ತು ಜೀವಿತವನ್ನು ವ್ಯಯಕ್ತಿಕವಾಗಿಯೂ, ಸಾರ್ವಜನಿಕವಾಗಿಯೂ ಸಿದ್ಧಪಡಿಸಿಕೊಳ್ಳಬೇಕು.

ಹಿಂದಿನ ಅಧ್ಯಾಯದಲ್ಲಿ, ದಾವೀದನು ದೇವರ ಮಂಜೂಷಕ್ಕಾಗಿ ಸಿದ್ಧಪಡಿಸಿದ ಸ್ಥಳವನ್ನು, ಅದನ್ನು ಹೊರುವವದಕ್ಕೆ ಜನರನ್ನು, ಯಜ್ಞಕ್ಕೆ ಬೇಕಾದುದನ್ನು ಸಿದ್ಧಪಡಿಸಿಕೊಂಡನು. ಮೊದಲ ಪೂರ್ವಕಾಲವೃತ್ತಾಂತ 15:16-24 ಸಿದ್ಧತೆಯ ಬಗ್ಗೆ ತಿಳಿಸುತ್ತದೆ. ನಾವು ವಿವಿಧ ಕಾರ್ಯಕ್ಕೆ ವಿವಿಧ ಜನರನ್ನು ಆರಾಧಿಸುವ ಸೇವೆಗೆ ಆರಿಸಿಕೊಂಡಿದ್ದನು. ಇದಲ್ಲದೆ ವಿವಿಧ ಕಾರ್ಯಕ್ಕೆ ಸರಿ ಹೊಂದುವ ಜನರನ್ನು ಆರಿಸಿಕೊಂಡನು. ಮಂಜೂಷವನ್ನು ಹೊರುವವರ ಸಂಗಡ, ಹಾಡುಗಾರರು, ಸಂಗೀತವನ್ನು ನೀಡಲು ವಾದ್ಯಗಾರರನ್ನು ಮಂಜೂಷವನ್ನು ಕಾಯಲು ದ್ವಾರಪಾಲಕರನ್ನು ನೇಮಿಸಿದನು. ವಚನ 22 ವಿಶೇಷ ಗಮನಕ್ಕೆ ಯೋಗ್ಯವಾಗಿದೆ: "ಕೆನನಾಯನುನ್ನು ಗಾಯನ ನಾಯಕನಾಗಿ ನೇಮಿಸಿದ್ದರು ಅವನು ಅದರಲ್ಲಿ ನುರಿತವನಾಗಿದ್ದರಿಂದ ಅದರ ಶಿಕ್ಷಣವನ್ನು ನೀಡಿದನು." ನಾವು ಆರಾಧನೆಯ ಕೂಟವನ್ನು ಏರ್ಪಡಿಸುವಾಗ, ನಮ್ಮಲ್ಲಿರುವ ರಚನಾಕ್ರಮದಂತೆ ಉಪಯೋಗಿಸುವ - ಆರಾಧನೆಯು ಉತ್ತಮವಾದುದ್ದನ್ನೇ ಬಯಸುತ್ತೇವೆ.

ಯೆರೂಸಲೇಮಿನಲ್ಲಿ ಮಂಜೂಷವನ್ನು ಪ್ರತಿಷ್ಠಾಪಿಸಿದ ನಂತರ, ದಾವೀದನು, ಪ್ರತಿನಿತ್ಯದ ಆರಾಧನೆಗೆ ಸಿದ್ಧತೆಯನ್ನು ಮುಂದುವರಿಸಿದನು ಎಂದು 1 ಪೂರ್ವಕಾಲವೃತ್ತಾಂತ 16ನೇ ಅಧ್ಯಾಯ ತಿಳಿಸುತ್ತದೆ. ಮತ್ತು "ಮಂಜೂಷದ ಮುಂದೆ ದೇವರಾಧನೆ ಸ್ತುತಿಸಲೂ, ಹಾಗೂ ವಂದನಾರ್ಪಣೆ ನಡೆಸುವದಕ್ಕೋಸ್ಕರ ದಾವೀದನು ಕೆಲವು ಮಂದಿ ಲೇವಿಯರನ್ನು ನೇಮಿಸಿದನು" (ವಚನ 4).[31]

"ನಾವು ಏನೇ ಮಾಡಿದರು ಅದನ್ನು ಸರಿಯಾಗಿ ಮಾಡುವದು," ಯೋಗ್ಯವಾಗಿದೆ ಎಂದು ನನ್ನ ತಂದೆ ಹೇಳುತ್ತಿದ್ದರು. ನಮ್ಮ ಜೀವಿತದ ಇತರ ಕ್ಷೇತ್ರಗಳಲ್ಲಿ ನಿಯಮಗಳನ್ನು ಪಾಲಿಸಿದರೆ ಸಾಕು ಎಂದು ಯೋಚಿಸಿಕೊಂಡು ಹೇಗೂ ದೇವರು ಮೆಚ್ಚುತ್ತಾನೆ ಎಂದು ದೇವರನ್ನು ಆರಾಧಿಸಲು ಬರುತ್ತೇವೆ. ಶನಿವಾರ ರಾತ್ರಿ ತಡವಾಗಿ ನಿದ್ರಿಸಿ, ಭಾನುವಾರ ಮುಂಜಾನೆ ಹೆಚ್ಚು ಹೊತ್ತು ನಿದ್ರಿಸಿ, ತಡವಾಗಿ ಆರಾಧನೆಯ ಕಟ್ಟಡಕ್ಕೆ ಬಂದು, ಆಯಾಸದಿಂದ ಎಲ್ಲರೊಟ್ಟಿಗೆ

ಕುಳಿತು, ಆರಾಧಿಸಿದರೆ "ದೇವರು ಏನನ್ನಾದರು ನೀಡುವನು" ಎಂದು ಯೋಚಿಸುತ್ತೇವೆ.

ಅರ್ಥಪೂರ್ಣವಾದ ಆರಾಧನೆಗೆ ಸಿದ್ಧತೆಯು ಅವಶ್ಯ ಸಂಧಿಸುವ ಸ್ಥಳವು ಸಿದ್ಧಗೊಳ್ಳ ಬೇಕು, ಕರ್ತನ ಭೋಜನ ಸಿದ್ಧಗೊಳ್ಳಬೇಕು. ಸಂಗೀತದ ನಾಯಕರು, ಪ್ರಾರ್ಥನೆ ನಡಿಸುವವರು ಸಿದ್ಧಗೊಳ್ಳಬೇಕು. ಪ್ರಸಂಗಿಗಳು ಸಿದ್ಧರಾಗಬೇಕು. ಸಾರ್ವಜನಿಕ ಆರಾ ಧನೆಯ ಕುರಿತಾಗಿ ಪೌಲನು ತಿಳಿಸಿರುವುದು - "ಎಲ್ಲವೂ ಯೋಗ್ಯವಾದ ರೀತಿಯಲ್ಲೂ ಮತ್ತು ಕ್ರಮದಿಂದಲೂ ನಡೆಯಲಿ" (1 ಕೊರಿಂಥ 14:40).

ದೇವರ ಸಿಂಹಾಸನದ ಮುಂದೆ ಬರಲು, ಪ್ರತಿ ಪುರುಷ - ಸ್ತ್ರೀಯರು ವ್ಯಯಕ್ತಿಕವಾಗಿ ಹೃದಯವನ್ನು - ಜೀವಿತವನ್ನು ಸಿದ್ಧಪಡಿಸಿಕೊಂಡು ಬರುವದು ಬಹು ಪ್ರಾಮುಖ್ಯವಾದದ್ದು.

## ಆರಾಧನೆಯಲ್ಲಿ ನಮಗೆ ಏನೂ ದೊರಕದೆ ಹೋದರೆ ನಾವು ನಮ್ಮ ಹೃದಯವನ್ನು ಮೊದಲು ಪರೀಕ್ಷಿಸಿಕೊಳ್ಳೋಣ

## (2 ಸಮುವೇಲ 6:16, 20-23; 1 ಪೂರ್ವಕಾಲವೃತ್ತಾಂತ 15:29; 16:43)

2 ಸಮುವೇಲ 7ರಿಂದ ಮುಂದುವರಿಯುವದಕ್ಕಿಂತ ಮೊದಲು ಎರಡನೇ ಸತ್ಯವನ್ನು ನಿಮಗೆ ಒತ್ತಿ ತಿಳಿಸುತ್ತೇನೆ: ಆರಾಧನೆಯ ಕೂಟದಲ್ಲಿ ನಮಗೆ ಏನೂ ದೊರಕದೆ ಇರು ವಾಗ, ನಾವು ಮೊದಲು ನಮ್ಮ ಹೃದಯವನ್ನು ಪರೀಕ್ಷಿಸಿಕೊಳ್ಳಬೇಕು.

2 ಸಮುವೇಲ 6:16ರಲ್ಲಿ "ಮಂಜೂಷವು ದಾವೀದ ನಗರದೊಳಗೆ ಪ್ರವೇಶಿಸುವಾಗ ಸೌಲನ ಮಗಳಾದ ಮೀಕಲಳು ಕಿಟಕಿಯಿಂದ ಇಣಕಿ ನೋಡಿ ದಾವೀದನು ಕರ್ತನ ಮುಂದೆ ಜಿಗಿಯುತ್ತಾ ಕುಣಿಯುತ್ತಾ ಇರುವದನ್ನು ಕಂಡು ಮನಸ್ಸಿನಲ್ಲಿ ಅವನನ್ನು ತಿರಸ್ಕರಿಸಿದಳು." ಮೀಕಲಳ ಅಘಾತಕರವಾದ ಕಥೆಯನ್ನು ನೆನಪು ಮಾಡಿಕೊಳ್ಳಿ. ಸೌಲನು ತನ್ನ ಮಗಳನ್ನು ದಾವೀದನಿಗೆ ಕೊಟ್ಟನು, ದಾವೀದನು ಸೌಲನಿಗೆ ವಿರೋಧಿಯಾಗಲು, ಅವಳನ್ನು ಮತ್ತೊಬ್ಬನಿಗೆ ಕೊಟ್ಟನು. ಅಬ್ನೇರನು ದಾವೀದನನ್ನು ಇಸ್ರಾಯೇಲ್ಯರ ಅರಸನನ್ನಾಗಿ ಮಾಡುವ ಸಂಧಾನವನ್ನು ಮಾಡುವಾಗ ದಾವೀದನು ಮೀಕಲಳನ್ನು ತನಗೆ ಹಿಂದಿರುಗಿಸ ಬೇಕೆಂದು ಮನವಿ ಮಾಡಿಕೊಂಡನು. ಮೀಕಲಳು ಎರಡನೇಯ ಗಂಡನಿಂದ ಹಿಂದಕ್ಕೆ ತೆಗೆದು ಕೊಂಡಾಗ, ಅವನು ಅವಳಿಗಾಗಿ ಗೋಳಾಡಿದನು, ಆದರೆ ಒತ್ತಾಯ ಪೂರ್ವಕವಾಗಿ ಹಿಂದಕ್ಕೆ ಕಳುಹಿಸಲ್ಪಟ್ಟನು. ಇದು ಈ ಅಸಂತೋಷದ ಕಥೆಯ ವ್ಯಥೆ.

ಮಂಜೂಷವು ಪಟ್ಟಣದ ದ್ವಾರಗಳಿಗೆ ಬಂದಾಗ, ಮೀಕಲಳು ಅರಮನೆಯ ಕಿಟಕಿಯಿಂದ ದಾವೀದನನ್ನು ನೋಡಿ "ಮನಸ್ಸಿನಲ್ಲಿ ಅವನನ್ನು ತಿರಸ್ಕರಿಸಿದಳು" ನಾವು ಓದಿರುವದು 1 ಸಮುವೇಲ 18:20ರಲ್ಲಿ "ಸೌಲನ ಮಗಳಾದ ಮೀಕಲಳು ದಾವೀದನನ್ನು *ಪ್ರೀತಿಸಿದಳು.*" ವರುಷಗಳು ಕಳೆದ ಹಾಗೆ ಪ್ರೀತಿಯ ಜ್ವಾಲೆಯು ನಂದಿಹೋಗಿ; ಜೀವವಿಲ್ಲದ ಇದ್ದಿಲು ಮಾತ್ರ ಉಳಿದಿತ್ತು, ಈಗ ಆದರೆ ಅವನನ್ನು ತಿರಸ್ಕರಿಸಿದಳು.

ಸಂಭ್ರೊಮೊತ್ಸವವು ತೀರಿದ ನಂತರ, "ದಾವೀದನೂ ತನ್ನ ಮನೆಯವರನ್ನು ಆಶೀರ್ವದಿಸುವದಕ್ಕೋಸ್ಕರ ಹೋದನು" (1 ಪೂರ್ವಕಾಲವೃತ್ತಾಂತ 16:43). ದಾವೀದನು ತನ್ನಲ್ಲಿ ಉಂಟಾದ ಆತ್ಮೀಕ ಸಂತೋಷವನ್ನು ಉದ್ವೇಗ ಪೂರ್ವಕವಾಗಿ, "ತನ್ನ ಮನೆಯವ ರೊಟ್ಟಿಗೆ ಹಂಚಿಕೊಳ್ಳ ಬಯಸಿದನು. ಆದರೆ ಅವನು ತನ್ನ ಮನೆಗೆ ಹಿಂದಿರುಗಿದಾಗ,"[32] ಸಿಟ್ಟುಗೊಂಡ ಮೀಕಲಳು ಕಹಿಯಾದ ಮಾತುಗಳಿಂದ ಅವನನ್ನು ಬಾಗಿಲಿನಲ್ಲಿ ಸಂಧಿಸಿದಳು: "ಈ ಹೊತ್ತು ಇಸ್ರಾಯೇಲ್ಯರ ಅರಸನು ಎಂಥ ಗೌರವದಿಂದ ನಡೆದು ಕೊಂಡನು! ನೀಚರಲ್ಲೊಬ್ಬನಂತೆ ತನ್ನ ಜನರ ದಾಸಿಯರ ಮುಂದೆ ಬೆತ್ತಲೆಯಾಗಿದ್ದನಲ್ಲಾ ಎಂದಳು" (2 ಸಮುವೇಲ 6:20ಸಿ). "ಬೆತ್ತಲೆಯಾಗಿದ್ದನಲ್ಲಾ" ಅದರ ಅರ್ಥ ಬೆತ್ತಲೆತನವನ್ನು ತೋರಿ ಸಿದನು ಎಂಬುದಾಗಿ ಅಲ್ಲ (ಅವನು ಎಫೋದನ್ನು ಧರಿಸಿದ್ದನು).[33] ಆದರೆ ಇಲ್ಲಿನ ಮುಖ್ಯ ಪದ "ನೀಚರಲೊಬ್ಬನು"; ಮೀಕಲಳ ದೃಷ್ಟಿಯಲ್ಲಿ ದಾವೀದನು ತನ್ನನ್ನೆ ಮೂರ್ಖನನ್ನಾಗಿ

ಮಾಡಿಕೊಂಡಿದ್ದನು, ಯಾವ ವಿಷಯವು ದಾವೀದನನ್ನು ಉನ್ನತ ಪದವಿಗೆ ನಡಿಸಿತ್ತೋ, ಆ ವಿಷಯವನ್ನೇ ಆಕೆಯು ತಿರಸ್ಕರಿಸಿದಳು: ದಾವೀದನು ತನ್ನ ಜನರೊಂದಿಗೆ ಸಮಾನ ಮಾಡಿಕೊಂಡಿದ್ದನು, ಮತ್ತು ದೇವರಿಗಾಗಿ ಅತ್ಯಾಸಕ್ತಿವುಳ್ಳವನಾಗಿದ್ದ, ವಿಷಯವನ್ನೇ ತಿರಸ್ಕರಿಸಿದಳು.

ದಾವೀದನ ಮೋರೆ ಬಾಡಿತು; ಅವನ ಸಂಭ್ರಮ ಕರಗಿ ಹೋಯಿತು. ದೇವರೇ ಅವನನ್ನು ಆರಿಸಿಕೊಂಡು, ಉನ್ನತ ಸ್ಥಿತಿಗೆ ತಂದವನು ಆದುದರಿಂದ ಅವನು ನೀಚನಾಗಿ ಕಂಡರೂ ಸಹ, ದೇವರನ್ನು ಹೃದಯ ಪೂರ್ವಕವಾಗಿ ಆರಾಧಿಸುತ್ತಾನೆ, ಅಂತಿಮವಾಗಿ ದೇವರೇ ತನ್ನನ್ನು ಪ್ರತಿಪಾಧಿಸುವನು (ಸಮರ್ಥಿಸುವನು) ಎಂದು ಉತ್ತರಕೊಟ್ಟನು.

ಈ ಚಿಕ್ಕ ದುಖದ ವಿಷಯ 2 ಸಮುವೇಲ 6:23ರಲ್ಲಿ ಅಂತ್ಯಗೊಳ್ಳುತ್ತದೆ: “ಸೌಲನ ಮಗಳಾದ ಮೀಕಲಳು ಜೀವದಿಂದಿರುವವರೆಗೂ ಮಕ್ಕಳೇ ಆಗಲಿಲ್ಲ.”[34] “ಆಕೆಯು ಬಂಜೆಯಾಗಲಿ ಎಂದು ದೇವರೇ ಶಪಿಸಿದನು”[35]; ಮತ್ತು ಇನ್ನೆಂದಿಗೂ ಅವರಿಬ್ಬರೂ ದಂಪತಿಗಳಾಗಿ ಜೀವಿಸಲಿಲ್ಲ. ಬಹುಶ ಇವೆರಡು ಸತ್ಯವಾಯಿತು.

ಈ ಅಘಾತದ ಬಗ್ಗೆ ಇನ್ನೂ ಹೆಚ್ಚು ಹೇಳಬಹುದು, ಈ ಒಂದು ಕೌಟುಂಬಿಕ ನಾಟಕದಲ್ಲಿ, ಒಂದು ಕ್ಷಣ ಸಂಬಂಧಗಳು ನಾಶವಾದವು. ಹೇಗೂ ನಾವು ಆರಾಧನೆಯ ವಿಷಯಕ್ಕೆ ಬರೋಣ. ದೇವರ ಮಂಜೂಷವನ್ನು ಯೆರೂಸಲೇಮಿಗೆ ತಂದ ವಿಷಯ, ಇಸ್ರಾಯೇಲ್ಯರ ಚರಿತ್ರೆಯಲ್ಲಿ ಒಂದು ದೊಡ್ಡ ಘಟನೆಯಾಗಿತ್ತು. ಕರ್ತನ ಮಂಜೂಷದ ಮೆರವಣಿಗೆಯನ್ನು ಯೆರೂಸಲೇಮಿನಲ್ಲಿ ಆಹ್ವಾನ ಸಮೂಹದೊಂದಿಗೆ ಮೀಕಲಳು ಸಹ ಸೇರಿಕೊಳ್ಳಬಹುದಿತ್ತು ಆದರೆ ಮೀಕಲಳ ಹೃದಯದ ಪರಿಸ್ಥಿತಿಯು ಸರಿಯಾಗಿ ಇಲ್ಲದೆ ಇದ್ದದ್ದರಿಂದ, ಈ ಸಂಭ್ರಮೋತ್ಸವದ ಸಮಯವು, ಅವಳನ್ನು ತಣ್ಣಗಾಗಿ ಮಾಡಿತ್ತು: “ದಾವೀದನೇ ನೀನು ನಿನ್ನನ್ನೇ ಮೂರ್ಖನಾಗಿ ಮಾಡಿಕೊಂಡೆ” ಎಂಬ ಹಿಯಾಳಿಕೆಯ ಮಾತಿನಿಂದ ಪ್ರತಿಕ್ರಿಯೆ ನೀಡಿದಳು!

ಆರಾಧನೆಯ ಕೂಟವನ್ನು ಟೀಕಿಸುವುದು, ಪ್ರಸಿದ್ಧಿಯಾಗಿರುವ ಒಳಾಂಗಣ ಕ್ರೀಡೆಯಾಗಿರುತ್ತದೆ. ಪ್ರಾಯೋಗಿಕವಾಗಿ ಹೇಳಿದರೆ, ಆರಾಧನೆಯನ್ನು ನಡಿಸುವವರಿಗೆ ಅರಿಕೆಯನ್ನು ನೀಡಲು, ನಾವು ಅಂಕಪಟ್ಟಿಯನ್ನು ಹಿಡಿದು: “ಗಾಯನದ ಮುಂದಾಳಿಗೆ 6 ಅಂಕ, ಪ್ರಾರ್ಥನೆಯ ಮುಂದಾಳಿಗೆ 3 ಅಂಕ, ಪ್ರಸಂಗಿಗೆ 5 ಅಂಕ ಮತ್ತು ಪೂರ್ಣವಾದ ಕೂಟಕ್ಕೆ 2 ಅಂಕ! ಕಡಿಮೆ” ಎಂದು ಆರಾಧನೆಯ ವಿಷಯದ ಬಗ್ಗೆ ಇಂಥಾ ಒಂದು ದೃಷ್ಟಿಕೋನದ ಸುಳಿವಿಗೆ ಸಿಕ್ಕಿಕೊಳ್ಳುವದು ಬಹಳ ಸುಲಭ: “ನಾನು ಕೂಟವನ್ನು *ಇಷ್ಟಪಟ್ಟರೆ* ಅದು ಒಳ್ಳೆಯದು; ಇಷ್ಟಪಡದೆ ಹೋದರೆ ಕೂಟವು ಕೆಟ್ಟದ್ದು.”

ಆರಾಧನೆಯು ದೇವರಿಗೆ *ಹೃದಯದಿಂದ* ಬರುವ ಪ್ರತಿಕ್ರಿಯೆ ಎಂದು, ನಾವು ಮೊದಲನೆಯದಾಗಿ ಗ್ರಹಿಸಿಕೊಳ್ಳಬೇಕು. “ನನಗೆ ಕೂಟದಲ್ಲಿ ಏನೂ ದೊರಕದೆ ಹೋದರೆ” ಇದು ಆರಾಧನೆಯ ಪ್ರಾಯೋಜಕರ ಸಮಸ್ಯೆಯಲ್ಲ, ಬಹುಶ ಅದು ನನ್ನಲ್ಲಿರುವ ಸಮಸ್ಯೆಯೇ, ಟೀಕೆಯ ಕಣ್ಣುಗಳಿಂದ ಮೀಕಲಳಂತೆ ನಾವು ಯಾರೂ ಆಗದಂತೆ ದೇವರು ನಮಗೆ ಸಹಾಯ ಮಾಡಲಿ.

## ಆರಾಧನೆಗೆ ಒಳ್ಳೆಯ ಉದ್ದೇಶಗಳು ಮಾತ್ರ ಸಾಲದು
## (2 ಸಮುವೇಲ 7:1-17; 1 ಪೂರ್ವಕಾಲವೃತ್ತಾಂತ 17:1-15)

2 ಸಮುವೇಲ 7ರಲ್ಲಿ ಮುಂದುವರಿಯುವಾಗ: ಕಲಿಯುವಂಥ ಪ್ರಾಮುಖ್ಯ ಪಾಠ ಆರಾಧನೆಗೆ, ಒಳ್ಳೆಯ ಸದುದ್ದೇಶಗಳು ಮಾತ್ರ ಸಕಾಗುವದಿಲ್ಲ.

2 ಸಮುವೇಲ 6 ಮತ್ತು 7ರ ನಡುವಿನ ಅಂತರದ ಸಮಯದಲ್ಲಿ ದಾವೀದನು ತನ್ನ ಅರಮನೆಯನ್ನು ಕಟ್ಟಿ ಮುಗಿಸಿದ್ದನು, ಮತ್ತು ಎಲ್ಲಾ ಯುದ್ಧಗಳನ್ನು ಮಾಡಿ ಮುಗಿಸಿದ್ದನು.[36] ಒಂದು ದಿವಸ ದಾವೀದನು ತನ್ನ ಅರಮನೆಯಲ್ಲಿ ಸಂತೋಷದಿಂದಲೂ, ವಿಶ್ರಾಂತಿಯನ್ನು

ಸವಿಯುವಾಗ ಈ ಆಲೋಚನೆಯ ಅವನ ಮನಸ್ಸಿಗೆ ಬಂತು. ಆಗ ದಾವೀದನು ತನಗೆ ಒಳ್ಳೆಯ ಯೋಚನೆ ಕೊಡುವವನೂ, ಒಳ್ಳೆ ಸ್ನೇಹಿತನೂ, ಭರವಸೆಗೆ[37] ಯೋಗ್ಯನೂ ಆಗಿದ್ದ ನಾತಾನನ್ನು ಕರೆದು ನೋಡು: "ನಾನು ದೇವದಾರುಮರದ ಮನೆಯಲ್ಲಿ ವಾಸವಾಗಿದ್ದೇನೆ; ದೇವರ ಮಂಜೂಷವಾದರೋ ಬಟ್ಟೆಯ ಮನೆಯಲ್ಲಿ ಇರುತ್ತದೆ!" ಎಂದು ಹೇಳಿದನು. ಆಗ ನಾತಾನನು ಅರಸನಿಗೆ "ಆಗಲಿ ಮನಸ್ಸಿದಂತೆ ಮಾಡು, ಕರ್ತನು ನಿನ್ನ ಸಂಗಡ ಇರುತ್ತಾನೆ ಅಂದನು" (2 ಸಮುವೇಲ 7:3).

ಆ ರಾತ್ರಿ ದೇವರು ನಾತಾನನಿಗೆ ದರ್ಶನದಲ್ಲಿ ಕಾಣಿಸಿಕೊಂಡು ನಾತಾನಾನು ದಾವೀದನ ಆಲೋಚನೆಗೆ ನೀಡಿರುವ ಸಮ್ಮತಿಯು, ದುಡುಕಿನ ಮುಂದಾಲೋಚನೆ ಎಂದು ತಿಳಿಸಿದನು. ಈ ವಿಷಯಕ್ಕೆ ಸಂಬಂಧಿಸಿದಂತೆ, ಅವರಿಬ್ಬರು ದೇವರ ಸಲಹೆಯನ್ನು ಸಮ್ಮತಿಯನ್ನು ಕೇಳಿ ಪಡೆಯಬೇಕಿತ್ತು. ಅನೇಕ ಸಾರಿ ನಮ್ಮ ಒಳ್ಳೆಯ ಆತ್ಮೀಕ ಸ್ನೇಹಿತರೆ ನಮ್ಮನ್ನು ತಪ್ಪಾದ ಮಾರ್ಗಕ್ಕೆ ನಡೆಸಬಹುದು ಎಂಬ ಮೊದಲನೆಯ ಪಾಠವನ್ನು ಇದರಿಂದ ಕಲಿಯುತ್ತೇವೆ (ನಾತಾನನು ದೇವರ ಪ್ರವಾದಿಯಾಗಿದ್ದನು). ಒಂದು ವೇಳೆ ನಮ್ಮ ಸದುದ್ದೇಶಗಳು ಒಳ್ಳೆಯದಾಗಿದ್ದರೂ, ನಮ್ಮ ಯೋಜನೆಗಳನ್ನು ದೇವರು ಸಮ್ಮತಿಸದೆ ಇರಬಹುದು ಇದು ಎರಡನೆಯ ಪಾಠ.

ಆರಾಧನೆಯಲ್ಲಿ ಕೆಲವು ಹೊಸಪದ್ಧತಿಗಳನ್ನು ಅಳವಡಿಸಿಕೊಳ್ಳುವದು ಸರ್ವ ಸಾಮಾನ್ಯವಾಗಿದೆ. ಇದರಲ್ಲಿ "ನನ್ನ ಉದ್ದೇಶ ದೇವರನ್ನು ಸನ್ಮಾನಿಸುವುದೇ ಆಗಿರುವದರಿಂದ ದೇವರು ಇದನ್ನು ಮೆಚ್ಚುವನು." ದೇವರ ವಾಕ್ಯವನ್ನು ನೋಡು ವದರಿಂದ ನನ್ನ ಕಾರ್ಯಗಳು ದೇವರಿಗೆ ಮೆಚ್ಚಿಗೆಯಾಗಿವೆಯೋ ಎಂದು *ಗ್ರಹಿಸಬಹುದು*. ನಾನು ಮಾಡುವ ಆ ಕಾರ್ಯವಾಗಲಿ, ಈ ಕಾರ್ಯವಾಗಲಿ, ಅದು ದೇವರಿಗೆ ಮೆಚ್ಚಿಗೆಯಾಗಿವೆಯೋ ಎಂದು ಸ್ಪಷ್ಟಪಡಿಸಿಕೊಳ್ಳಲು ದೇವರ ವಾಕ್ಯವನ್ನು[38] ಓದಿ *ತಿಳುಕೊಳ್ಳುವ* ಮಾರ್ಗವನ್ನೇ ಹಿಂಬಾಲಿಸಬೇಕು ಎಂದು ನಾನು ಪುನ ನಿಮಗೆ ತಿಳಿಸುತ್ತೇನೆ.

ಮರುದಿನ ನಾತಾನನು ದಾವೀದನ ಬಳಿಗೆ ಬಂದು, "ನಾನು ನಿನಗೆ ನೀಡಿದ ಸಲಹೆ ಅದು ತಪ್ಪಾದದ್ದು ಎಂದು ತಿಳಿಸಲು ಅವನಿಗೆ ಕಷ್ಟವಾಯಿತು"! ಹೇಗೂ ಅವನು ದೇವರ ಪ್ರವಾದಿಯಾಗಿದ್ದನು - ಕಷ್ಟದ ಕೆಲಸ ಎನ್ನುವದೇ ಪ್ರವಾದಿಯ ಕೆಲಸಕ್ಕೆ ವಿವರಣೆ ಅವನು ದಾವೀದನ ಬಳಿಗೆ ಯಥಾರ್ಥವಾಗಿ ಬಂದು ಈ ಸಂದೇಶವನ್ನು ನೀಡಿದನು. 2 ಸಮುವೇಲ 5ರಿಂದ 16ನೇ ವಚನದವರೆಗೆ ಈ ಸಂದೇಶವಿರುವ ಅಧ್ಯಾಯವಿದೆ. ಇದು ಹಳೇ ಒಡಂಬಡಿಕೆಯಲ್ಲಿರುವ ಅತಿ ಪ್ರಾಮುಖ್ಯವಾದ ವಾಕ್ಯಭಾಗ.

"ನನಗೋಸ್ಕರವಾಗಿ ಒಂದು ಮನೆಯನ್ನು ನಿರ್ಮಿಸು ಎಂದು ನಾನು ನಿನಗೆ ಕೇಳಲಿಲ್ಲ." ಮನೆಯಿಲ್ಲದೆ ನಾನು ಸುಖವಾಗಿದ್ದೇನೆ[39] "ನೀನು ನನಗೆ ಆಲಯವನ್ನು *ಕಟ್ಟಬಾರದು.* ಎಂದು ದೇವರು ಸರಳವಾಗಿ ಉತ್ತರಿಸಿದನು" (1 ಪೂರ್ವಕಾಲವೃತ್ತಾಂತ 17:4; ಒತ್ತಿ ಹೇಳಿದ್ದು ನನ್ನದು). ಬೇರೆ ಮಾತುಗಳಲ್ಲಿ "ನಿನ್ನ ಸದುದ್ದೇಶಗಳು ಒಳ್ಳೆಯದೇ, ಆದರೆ ನಾನು ನಿನ್ನಿಂದ ಇದನ್ನು ಬಯಸುವದಿಲ್ಲ."

ಅನೇಕ ಕಾರಣಗಳ ನಿಮಿತ್ತ, ದಾವೀದನ ಕನಸನ್ನು ದೇವರು "ಸಮ್ಮತಿಸಲಿಲ್ಲ." ನಂತರ ದಾವೀದನು ಈ ಸುದ್ದಿಯನ್ನು ನೀಡಿದನು:

> ಆದರೆ ಕರ್ತನು ನನಗೆ - ನೀನು ಬಹಳ ರಕ್ತವನ್ನು ಸುರಿಸಿದವನೂ ಮಹಾಯುದ್ಧಗಳನ್ನು ನಡಿಸಿದವನೂ ಆಗಿರುತ್ತೀ. ನೀನು ನನ್ನೆದುರಿನಲ್ಲಿ ಬಹಳ ರಕ್ತವನ್ನು ಸುರಿಸಿದ್ದರಿಂದ ನನ್ನ ಹೆಸರಿಗಾಗಿ ಆಲಯವನ್ನು ಕಟ್ಟಬಾರದು. ನಿನಗೆ ಒಬ್ಬ ಮಗನು ಹುಟ್ಟುವನು; ಅವನು ಸಮಾಧಾನ ಪುರುಷನಾಗಿರುವನು. ನಾನು ಅವನ ಸುತ್ತಣ ಎಲ್ಲಾ ವಿರೋಧಿಗಳನ್ನು ಅಣಗಿಸಿ ಅವನಿಗೆ ಸಮಾಧಾನವನ್ನು ಅನುಗ್ರಹಿಸುವೆನು. ಅವನಿಗೆ ಸೊಲೊಮೋನನೆಂಬ ಹೆಸರಿರುವದು. ಅವನ ಕಾಲದಲ್ಲಿ ಇಸ್ರಾಯೇಲ್ಯರಿಗೆ

> ಸಮಾಧಾನವನ್ನೂ ಸೌಭಾಗ್ಯವನ್ನೂ ದಯಪಾಲಿಸುವೆನು. ಅವನೇ ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು ... (1 ಪೂರ್ವಕಾಲವೃತ್ತಾಂತ 22:8-10).

ದಾವೀದನಿಗಾಗಿ ದೇವರು ಬೇರೆ ಜವಾಬ್ದಾರಿಗಳನ್ನು ನೇಮಿಸಿದ್ದನು: ಅದೇನೆಂದರೆ, ಅವನು ಚಕ್ರಾಧಿಪತ್ಯವನ್ನು ಕಟ್ಟಬೇಕಿತ್ತು,[40] ಮತ್ತು ಅವನ ಕುಟುಂಬವನ್ನು ಸುಸ್ಥಿತಿಗೆ ತರಬೇಕಿತ್ತು. ನಂತರ ಅವನ ಮಗನಾದ ಸೊಲೊಮೋನನು ಮಾತ್ರ ದೇವರ ಆಲಯವನ್ನು ಕಟ್ಟುವದಕ್ಕಿದ್ದನು.

ನಮ್ಮ ಕನಸುಗಳಿಗೆ ದೇವರು "ಸಮ್ಮತಿಸದೆ" ಇದ್ದಾಗ, ಅದು ಕಷ್ಟಕರವಲ್ಲವೇ? ನಾವು ಸದುದ್ದೇಶದಿಂದ ಯೋಜನೆಗಳನ್ನು ನಿರ್ಮಿಸುತ್ತೇವೆ. ಆದರೆ ದೇವರು ಅದನ್ನು ಸಮ್ಮತಿಸುವುದೇ ಇಲ್ಲ. ಇದರಿಂದ ನಮ್ಮ ಯೋಜನೆಗಳು ಫಲಿಸುವದಿಲ್ಲ. ಒಂದು ವೇಳೆ ನಮ್ಮ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವದರಲ್ಲಿ, ಕ್ರೈಸ್ತ ಕುಟುಂಬವನ್ನು ಕಟ್ಟುವದರಲ್ಲಿ, ಮಕ್ಕಳನ್ನು ಪೋಷಿಸಿ ಬೆಳೆಸುವದರಲ್ಲಿ ಅಥವಾ ನಮ್ಮ ಜೀವನದಲ್ಲಿ ಏನು ಮಾಡಬೇಕೆಂಬುವ ವಿಷಯದಲ್ಲಿ - ದೇವರು ಸಮ್ಮತಿಸದೆ ಹೋದರೆ[41] ನನ್ನಲ್ಲಿದ್ದ ಕನಸುಗಳು; ಭಗ್ನಗೊಂಡಿರುವಾಗಲೂ ಈ ಅನುಭವವಾಗಿರಬಹುದು.

ದೇವರು "ಸಮ್ಮತಿಸದೇ" ಹೋದರೆ ಅದರ ಅರ್ಥ ದೇವರು ನನ್ನನ್ನು ತಳ್ಳಿಬಿಟ್ಟಿದ್ದಾನೆ ಎಂಬುದಾಗಿ ಅಲ್ಲ. ದೇವರು ನಮ್ಮ ಭಿನ್ನಹವನ್ನು ತಿರಸ್ಕರಿಸಿದರೂ, ನಮ್ಮನ್ನು ಆತನು ತಿರಸ್ಕರಿಸುವದಿಲ್ಲ.[42] ನಂತರ ದೇವರು ದಾವೀದನಿಗೆ, "ನೀನು ನನ್ನ ಹೆಸರಿಗೋಸ್ಕರ ಒಂದು ಮನೆಯನ್ನು ಕಟ್ಟುವದಕ್ಕೆ ಮನಸ್ಸು ಮಾಡಿದ್ದು *ಒಳ್ಳೇದೇ* ಸರಿ ಅಂದನು" (1 ಅರಸುಗಳು 8:18; ಒತ್ತಿ ಹೇಳಿದ್ದು ನನ್ನದು).

ಎರಡು ಸಮುವೇಲ 7ರಲ್ಲಿ ಇರುವಂಥ ಪಾಠ, ದೇವರು "ಸಮ್ಮತಿ" ನೀಡದೆ ಹೋದಾಗ, ಇದರ ಅರ್ಥ ದೇವರ ಮನಸ್ಸಿನಲ್ಲಿ ಇನ್ನೂ ಉತ್ತಮವಾದದ್ದು ಇದೆ ಎಂಬುದಾಗಿ ದೇವರು ದಾವೀದನಿಗೆ ಇಸ್ರಾಯೇಲ್ಯರ ವಿಷಯದಲ್ಲಿ ಮಾಡಬೇಕಾದ ವಿಷಯಗಳನ್ನು ತಿಳಿಸಿದ ಮೇಲೆ: "ಕರ್ತನಾದ ನಾನು ನಿನಗೋಸ್ಕರ ಒಂದು ಮನೆಯನ್ನು ಕಟ್ಟುವೆನೆಂದು ಮಾತು ಕೊಡುತ್ತೇನೆ" (ವಚನ 11). ಈ ಪದಗಳಲ್ಲಿ ಒಂದು ಪಾತ್ರವನ್ನು ತಿಳಿದುಕೊಳ್ಳುತ್ತೇನೆ. "ನೀನು ನನಗಾಗಿ ಮನೆಯನ್ನು ಕಟ್ಟಬಾರದು" (ಒಂದು ದೇವಾಲಯ) ಆದರೆ "ನಾನು ನಿನಗಾಗಿ ಒಂದು ಮನೆಯನ್ನು ಕಟ್ಟುತ್ತೇನೆ" (ರಾಜ್ಯಾಧಿಪತ್ಯ) ಎರಡನೇ ಸಮುವೇಲ 7:11-16 "ಇದನ್ನು ಹಳೆ ಒಡಂಬಡಿಕೆಯಲ್ಲಿ ರಾಜಕೀಯ ಸಿದ್ಧಾಂಥಗಳಿಗೆ ತಳಹದಿಯಾಗಿರುವ ವಿಚಾರಗಳ, ಶೃಂಗ ಸಭೆ ಎಂದು ಕರೆಯಲಾಗಿದೆ." ದೇವರು ಅವನ ರಾಜ್ಯವನ್ನು ಸ್ಥಾಪಿಸುವೆನು ಎಂದು ಹೇಳಿದನು:

> ನಿನ್ನ ಆಯುಷ್ಕಾಲವು ಮುಗಿದು ನೀನು ಪಿತೃಗಳ ಬಳಿಗೆ ಸೇರಿದ ಮೇಲೆ ನಿನ್ನಿಂದ ಹುಟ್ಟುವವನನ್ನು ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರಪಡಿಸುವೆನು. ಅವನು ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು; ನಾನು ಅವನ ರಾಜ್ಯಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು. ನಾನು ಅವನಿಗೆ ತಂದೆಯಾಗಿರುವೆನು, ಅವನು ನನಗೆ ಮಗನಾಗಿರುವನು; ಅವನು ತಪ್ಪು ಮಾಡಿದರೆ ಅವನಿಗೆ ಮನುಷ್ಯಶಿಕ್ಷೆಯನ್ನು ಕೊಡುವೆನು, ನರಪುತ್ರರಂತೆ ಅವನನ್ನು ದಂಡಿಸುವೆನು. ಆದರೂ ನನ್ನ ಕೃಪೆಯು ಸೌಲನನ್ನು ಬಿಟ್ಟುಹೋದ ಹಾಗೆ ಅವನನ್ನು ಬಿಟ್ಟುಹೋಗುವದಿಲ್ಲ. ನಾನು ಸೌಲನನ್ನು ನಿನ್ನೆದುರಿನಿಂದ ಹೊರಡಿಸಿಬಿಟ್ಟೆನಲ್ಲಾ! ನಿನ್ನ ಮನೆಯೂ ಅರಸುತನವೂ ಸದಾಕಾಲ ಸ್ಥಿರವಾ ಗಿರುವವು (2 ಸಮುವೇಲ 7:12-16).

ದಾವೀದನಿಗೆ ಎರಡು ವಾಗ್ದಾನಗಳು ಕೊಡಲ್ಪಟ್ಟವು: (1) ಅವನ ಮಗನು ದೇವಾಲಯವನ್ನು ಕಟ್ಟುವನು, (2) ಅವನ ರಾಜ್ಯವು ನಿರಂತರವಾಗಿರುವದು. ಮೊದಲನೆಯ ವಾಗ್ದಾನ

ಅವನ ಮಗನ ಕುರಿತಾಗಿ ಇತ್ತು ಎಂದು ದಾವೀದನು ತಿಳಿದುಕೊಂಡನು.[43] ಎರಡನೆಯ ವಾಗ್ದಾನವು ಸೊಲೊಮೋನನ ರಾಜ್ಯಭಾರದ ದಿನಗಳನ್ನು ದಾಟಿ, ಅವನ ವಂಶದವನಾದ ಯೆಹೂದ್ಯರು ರಾಜಭಾರ ಮಾಡಿದ ದಿವಸಗಳವರೆಗೂ ಮುಂದುವರೆದಿತ್ತು. ಈ ಅರಸುಗಳು ಯಾವ ರೀತಿಯಲ್ಲಿ ಇರಬೇಕಿತ್ತೋ ಆ ರೀತಿಯಲ್ಲಿ ಅವರು ಇಲ್ಲದೆ ಹೋದಾಗ್ಯೂ ಯೆಹೋವನು ಅವರ ರಾಜ್ಯಧಿಪತ್ಯವನ್ನು "ದಾವೀದನ ನಿಮಿತ್ತ ಮುಂದುವರಿಸಿದನು."[44] ಕೊನೆಯಲ್ಲಿ, ದೇವರ ತಾಳ್ಮೆಗೆ ಅಂತ್ಯ ಬಂದು, ದಕ್ಷಿಣಭಾಗದ ಯೂದಾಯವು ಬಾಬಿಲೋನಿನ ವಶವಾಯಿತು. ಇನ್ನೆಂದಿಗೂ ದಾವೀದನ ವಂಶದವರು ಆ ಸಿಂಹಾಸನದಲ್ಲಿ ಕುಳಿತುಕೊಳ್ಳಲಿಲ್ಲ. ಆದಾಗ್ಯೂ ದೇವರು ತನ್ನ ವಾಗ್ದಾನವನ್ನು ಮರೆಯಲಿಲ್ಲ. ದೇವರು ಒಬ್ಬ ಪ್ರವಾದಿಗೆ ಪ್ರೇರಣೆಯನ್ನು ನೀಡಿ, ಅವನ ಪ್ರವಾದನ ವಾಕ್ಯದಿಂದ, ದಾವೀದನ ವಂಶದವನೇ, ದಾವೀದನ ಸಿಂಹಾಸನದಲ್ಲಿ ಕುಳಿತುಕೊಳ್ಳುವನು ಎಂದು ಮುಂತಿಳಿಸಿದನು:

> ಕರ್ತನು ಹೀಗನ್ನುತ್ತಾನೆ - ಇಗೋ, ನಾನು ಮುಂದಿನ ಕಾಲದಲ್ಲಿ ದಾವೀದನೆಂಬ ಮೂಲದಿಂದ ಸದ್ಧರ್ಮಿಯಾದ ಮೊಳಿಕೆಯನ್ನು ಚಿಗುರಿಸುವೆನು; ಅವನು ರಾಜನಾಗಿ ಆಳುತ್ತಾ ವಿವೇಕದಿಂದ ಕಾರ್ಯವನ್ನು ಸಾಧಿಸುತ್ತಾ ದೇಶದಲ್ಲಿ ನೀತಿನ್ಯಾಯಗಳನ್ನು ನಿರ್ವಹಿಸುವನು. ಅವನ ಕಾಲದಲ್ಲಿ ಯೆಹೂದ್ಯರು ಸುರಕ್ಷಿತರಾಗಿರುವರು, ಇಸ್ರಾಯೇಲ್ಯರು ನೆಮ್ಮದಿಯಾಗಿ ವಾಸಿಸುವರು (ಯೆರೆಮೀಯ 23:5, 6).

"ನೀತಿವಂತನಾದ ಯೇಸು ಕ್ರಿಸ್ತನು" ಎಂಬ ವಾಕ್ಯ (1 ಯೋಹಾನ 2:1) ನೆರವೇರಿದ ಪ್ರವಾದನಾ ವಾಖ್ಯವೇ ಮತ್ತಾಯನ ಸುವಾರ್ತೆಯಲ್ಲಿ "*ದಾವೀದನ ವಂಶದವನಾದ ಯೇಸು ಕ್ರಿಸ್ತನ ವಂಶಾವಳಿ* ಎಂದು ಪ್ರಾರಂಭವಾಗುತ್ತದೆ" (ವಚನ 1; ಒತ್ತಿ ಹೇಳಿದ್ದು ನನ್ನದು).[45] ನಿತ್ಯವಾದ ರಾಜ್ಯವನ್ನು, ಸ್ಥಾಪಿಸುವದಕ್ಕಾಗಿ ಯೇಸು ಕ್ರಿಸ್ತನು ಬಂದನು ಅದು ಎಂದಿಗೂ ನಾಶವಾಗದಂಥ ಆತ್ಮೀಕ ರಾಜ್ಯ,[46] ಯೇಸು ಕ್ರಿಸ್ತನು ಪುನರುತ್ಥಾನ ಹೊಂದಿ, ಪರಲೋಕಕ್ಕೆ ಏರಿ ಹೋಗಿ, "ದಾವೀದನ ಸಿಂಹಾಸನದಲ್ಲಿ ಕೂತುಕೊಂಡನು."[47] ಅರಸನಾದ, ಯೇಸು ಕ್ರಿಸ್ತನು ತನ್ನ ಸಭೆ ಎಂಬ ರಾಜ್ಯವನ್ನು ಅಲ್ಲಿಂದಲೇ ಆಳುವವನಾಗಿದ್ದಾನೆ.[48]

ಆದ್ದರಿಂದ, ಇಬ್ರೀಯ ಗ್ರಂಥಕಾರನು, 2 ಸಮುವೇಲ 7ನೇ ವಾಕ್ಯವನ್ನು ಯೇಸು ಕ್ರಿಸ್ತನಲ್ಲಿ ನೆರವೇರಿದವು ಎಂದು ಸೂಚಿಸಿದ್ದಾನೆ. ಗ್ರಂಥಕಾರನು ಕೇಳುವದೇನೆಂದರೆ "ನಾನು ಅವನಿಗೆ ತಂದೆಯಾಗಿರುವೆನು; ಅವನು ನನಗೆ ಮಗನಾಗಿರುವನು ಎಂತಲೂ ದೇವರು ತನ್ನ ದೂತರೊಳಗೆ ಯಾವನಿಗಾದರೂ ಎಂದಾದರೂ ಹೇಳಿದ್ದುಂಟೋ?" (ಇಬ್ರಿಯ 1:5). ಈ ಹಿನ್ನೆಲೆಯಲ್ಲಿಯೇ ಅರ್ಥವಾದ ಉತ್ತರ "ದೇವರು ಈ ಮಾತನ್ನು ಯಾವ ದೇವದೂತರಿಗೂ ಹೇಳಲಿಲ್ಲ ಆದರೆ ಈ ಮಾತನ್ನು ತನ್ನ ಮಗನಾದ ಯೇಸುವಿನ ಕುರಿತು ಹೇಳುತ್ತಿದ್ದಾನೆ." ಪ್ರೇರಿತನಾದ ಗ್ರಂಥಕಾರನು ಪರೋಕ್ಷವಾಗಿ ತಿಳುಸುದೇನೆಂದರೆ ಸೊಲೊಮೋನನು ಮತ್ತು ಇತರ ಯೆಹೂದ್ಯರ ಅರಸುಗಳು 2 ಸಮುವೇಲ 7ರ ತಾತ್ಕಲಿಕವಾಗಿಯೂ, ಭಾಗಶವಾಗಿಯೂ (ಅ ಪೂರ್ವವಾದ) ಪ್ರವಾದನೆಯನ್ನು ನೆರವೇರಿಸಿದ್ದರು. ಆದರೆ ನಮ್ಮ ಪ್ರಭುವೂ ಒಡೆಯನೂ ಆದ ಯೇಸು ಕ್ರಿಸ್ತನ ಮುಖಾಂತರ, ಅಂತಿಮವಾದ ಪರಿಪೂರ್ಣವಾದ ಪ್ರವಾದನೆಗಳು ನೆರವೇರಿದವು!

ಒಂದು ಕ್ಷಣ ನಾನು ತಿಳಿಸಿದ ಈ ರಸವತ್ತಾದ ವಿಷಯವನ್ನು ಯೋಚಿಸಿ ನಾಶವಾಗುವಂಥ ಮರದಿಂದಲೂ, ಕಲ್ಲಿನಿಂದಲೂ, ನಿರ್ಮಿಸಿದಂಥ ಆಲಯವು, ಯೆರೂಸಲೇಮಿಗೆ ಬರುವವರನ್ನು ಆಶೀರ್ವದಿಸುತ್ತಿತ್ತು. ಎಂದು ದಾವೀದನು ತನ್ನ ಮನಸ್ಸಿನಲ್ಲಿ ಅಂದುಕೊಂಡಿದ್ದನು. ಆದರೆ ದೇವರು ನಿರಂತರವಾಗಿ ಲಕ್ಷಾಂತರ ಜನರನ್ನು ಶತಮಾನದುದ್ದಕ್ಕೂ, ಆಶೀರ್ವಧಿಸುವ ದೇವಾಲಯದ ಕುರಿತಾಗಿ ತನ್ನ ಮನಸ್ಸಿನಲ್ಲಿ ಯೋಚಿಸಿದ್ದನು. ದೇವರು ನಮ್ಮ ಆಲೋಚನೆಗಳಿಗೆ "ಸಮ್ಮತಿ" ನೀಡದಿರುವಾಗ, ಆತನ ಮನಸ್ಸಿನಲ್ಲಿ ನಮಗೋಸ್ಕರ

ಉತ್ತಮವಾದದ್ದನ್ನೆ ಆಲೋಚಿಸುತ್ತಿರುತ್ತಾನೆ; ಊಹೆಗೂ ಬಾರದ ನಿತ್ಯವಾದವುಗಳನ್ನು ದೇವರು ಆಲೋಚಿಸುತ್ತಾನೆ.

ದೇವರ ಸಲಹೆಯನ್ನು ಪಡೆಯದೆ ದಾವೀದನು ಯೋಜನೆಗಳನ್ನು ಮಾಡಿಕೊಂಡನು ಎಂಬ ವಿಷಯಕ್ಕೆ ಬರೋಣ. ಅವನ ಸದುದ್ದೇಶಗಳು ಗೌರವಯುತವಾದವುಗಳಾಗಿದ್ದವು.[49] ದೇವರನ್ನು ಗೌರವಿಸುವುದೇ ಅವನ ಉದ್ದೇಶವಾಗಿತ್ತು; ಆದರೆ ಅದಕ್ಕೆ ದೇವರ ಸಲಹೆ ಪಡೆಯಲಿಲ್ಲವಾದ್ದರಿಂದ ದೇವರು ಅವನ ಯೋಜನೆಯನ್ನು ಸಮ್ಮತಿಸಲಿಲ್ಲ. ಅಪೊಸ್ತಲನಾದ ಪೌಲನು ಆವೇಶಭರಿತವಾದಂಥ "ವ್ಯಕ್ತಿಗಳ ಬಗ್ಗೆ ಮಾತನಾಡಿ ಅವರ ಆಸಕ್ತಿ ಜ್ಞಾನಾನುಸಾರವಾದದಲ್ಲ" (ರೋಮಾಪುರ 10:2). ನಮ್ಮ ಎಲ್ಲಾ ಸದುದ್ದೇಶಗಳೂ ದೇವರ ಪ್ರಕಟಣೆಗಳಿಂದಾಗಬೇಕು, ನಾವು ಆರಾಧನೆಯ ಬಗ್ಗೆಯಾಗಲಿ, ಅಥವಾ ಇತರೆ ಕೂಟಗಳ ಬಗ್ಗೆ ಮಾತನಾಡುವಾಗ ಸದುದ್ದೇಶಗಳು ಮಾತ್ರ ಸಾಕಾಗುವದಿಲ್ಲ.

## ನಿಜವಾದ ಆರಾಧನೆಯು, ದೇವರೊಂದಿಗಿನ ಸಂಬಂಧದ ಪರಿಣಾಮವನ್ನು ಜೀವಿತದಲ್ಲಿ ತೋರಿಸುತ್ತದೆ (2 ಸಮುವೇಲ 7:18-29; 1 ಪೂರ್ವಕಾಲವೃತ್ತಾಂತ 17:16-27; 22; 28)

ದೇವರ ಖಂಡನೆಗೆ ದಾವೀದನು ಪ್ರತಿಕ್ರಿಯಿಸುವ ವ್ಯಕ್ತಿಯಾಗಿದ್ದ, ಕಾರಣದಿಂದ "ದಾವೀದನು ದೇವರ ಹೃದಯಕ್ಕೆ ಸಮೀಪಸ್ಥನಾದವನು" ಎಂಬುದಾಗಿ ಕರೆಯಲ್ಪಟ್ಟಿದ್ದಾನೆ.

ನಾನೇ ದಾವೀದನ ಸ್ಥಾನದಲ್ಲಿದ್ದು. ನಾತಾನನು ಬಂದು ನೀನು ದೇವಾಲಯವನ್ನು ಕಟ್ಟಬಾರದು ಎಂದು ಹೇಳಿದ್ದರೆ, ಹೌದು ದೇವರ ಮನಸ್ಸಿನಲ್ಲಿ ಬೇರೆ ಉತ್ತಮವಾದ ಆಲೋಚನೆಯು ಇರುವದರಿಂದ, ಈ ವಿಷಯದಲ್ಲಿ ಬೇಸರಗೊಳ್ಳದೆ, ಬಹುಶ ಎರಡು ಕಾರ್ಯಗಳನ್ನು ಮಾಡುತ್ತಿದೆ. ಮೊದಲನೆಯದಾಗಿ ವಾರಗಟ್ಟಲೆ ಮುನಿಸಿಕೊಂಡು ಇರುತ್ತಿದೆನೇನೋ? ನಾತಾನನು ತನಗುಂಟಾದ ದರ್ಶನದ ಈ ಎಲ್ಲಾ ಮಾತುಗಳನ್ನು ದಾವೀದನಿಗೆ ಹೇಳಿದನು (2 ಸಮುವೇಲ 7:17). "ಅನಂತರ ದಾವೀದನು ಹೋಗಿ ಯೆಹೋವನ ಸನ್ನಿಧಿಯಲ್ಲಿ ಕೂತುಕೊಂಡು[50] ಕರ್ತನೇ" (ವಚನ 18ಎ). ಅನಂತರ ದಾವೀದನು ತಾನು ಮಂಜೂಷಕ್ಕಾಗಿ ನಿರ್ಮಿಸಿದ ಗುಡಾರಕ್ಕೆ ಹೋಗಿ, ಒಬ್ಬ ದಾಸನು ತನ್ನ ಯಜಮಾನನ ಸನ್ನಿಧಿಯಲ್ಲಿ ಕುಳಿತುಕೊಳ್ಳುವಂತೆ, ಕೂತುಕೊಂಡನು.

ಕರ್ತನ ಸನ್ನಿಧಿಯಲ್ಲಿ ದಾವೀದನು ಗೌರವದಿಂದಲೂ, ತಗ್ಗಿದವನಾಗಿಯೂ ನಿಸ್ವಾರ್ಥಿಯಾಗಿಯೂ, ಪ್ರಾರ್ಥಿಸಿದನು. ದೇವರ ಮುಂದೆ ತನ್ನ ಬಗ್ಗೆ ಹತ್ತು ಸಾರಿ ನಿನ್ನ ಸೇವಕನು ಎಂದು ಉಲ್ಲೇಖಿಸಿಕೊಂಡನು, ದೇವರು ಮಾಡಿದ ಎಲ್ಲಾ ವಾಗ್ದಾನಗಳನ್ನು ಆತನು ನೆರವೇರಿಸಿ ದೇವರು ತನ್ನ ಮಹತ್ವವನ್ನು ಎಲ್ಲರಿಗೂ ಸ್ಪಷ್ಟವಾಗಿ ತೋರಿಸುವನು ಎಂದು ಪ್ರಾರ್ಥಿಸಿದನು:

> ... ಕರ್ತನೇ, ಯೆಹೋವನೇ, ನಾನೆಷ್ಟರವನು? ನನ್ನ ಮನೆ ಎಷ್ಟರದು? (ಅಂದರೆ, ನಾನು ಬಂದಿರುವ ಕುಟುಂಬ) ನೀನು ನನ್ನನ್ನು ಇಲ್ಲಿಯವರೆಗೂ ತಂದಿದ್ದೀಯಲ್ಲಾ; (ಸಿಂಹಾಸನಕ್ಕೆ) ... . ಕರ್ತನೇ, ಯೆಹೋವನೇ, ನೀನು ನಿನ್ನ ಸೇವಕನಾದ ದಾವೀದನನ್ನು ಬಲ್ಲೆ; ... ಯೆಹೋವನೇ ನೀನೇ ದೊಡ್ಡವನು; ನಿನ್ನ ಸಮಾನರು ಯಾರೂ ಇಲ್ಲ. ... ಕರ್ತನೇ, ಯೆಹೋವನೇ, ನಿನ್ನ ಸೇವಕನಿಗೆ ಈ ಶ್ರೇಷ್ಠ ವಾಗ್ದಾನಗಳನ್ನು ಮಾಡಿದ ನೀನು ದೇವಾರಾಗಿರುತ್ತೀ; ನಿನ್ನ ವಾಕ್ಯವು ಸತ್ಯವಾದದ್ದು. (ವಿಶ್ವಾಸಾರ್ಹನು; NIV) ... ಕರ್ತನೇ ಯೆಹೋವನೇ, ವಾಗ್ದಾನ ಮಾಡಿದವನು ನೀನೇ. ನಿನ್ನ ಆಶೀರ್ವಾದದಿಂದ ನಿನ್ನ ಸೇವಕನ ಮನೆಯಲ್ಲಿ ನಿತ್ಯ ಸೌಭಾಗ್ಯವಿರಲಿ (2 ಸಮುವೇಲ 7:18, 20, 22, 28, 29).

ಎರಡನೇಯದು, ನಾನು ದಾವೀದನ ಸ್ಥಾನದಲ್ಲಿದ್ದರೆ, ಬಹುಶ ನಾನು ಹೀಗೆ ಹೇಳಿರ ಬಹುದು, "ನನ್ನನ್ನು ದೇವಾಲಯವನ್ನು ಕಟ್ಟಲು ಬಿಡದಿದ್ದರೆ, ಈ ವಿಷಯದಲ್ಲಿ ನಾನು ನನ್ನ ಕೈಗಳನ್ನು ತೊಳೆದುಕೊಳ್ಳುತ್ತಿದ್ದೆ. ಈಗ ಅದು ಸೊಲೊಮೋನನಿನ ತಲೆ ನೋವು!" ಆದರೂ ದಾವೀದನೂ ತನ್ನ ದೇವಾಲಯವನ್ನು ಕಟ್ಟಲು ಬೇಕಾದ ಸಿದ್ಧತೆಯನ್ನು ಮಾಡಲು ತನ್ನ ಜೀವನವನ್ನು ಕಳೆದನು.

> ಅನಂತರ ದಾವೀದನು ಇಸ್ರಾಯೇಲ್ ದೇಶದಲ್ಲಿದ್ದ ಅನ್ಯಜನಗಳನ್ನು ಕೂಡಿಸುವದಕ್ಕೆ ಆಜ್ಞಾಪಿಸಿ ಅವರಲ್ಲಿದ್ದ ಕಲ್ಲು ಕುಟಿಗರನ್ನು ದೇವಾಲಯದ ಕಟ್ಟಡಕ್ಕಾಗಿ ಕಲ್ಲುಗಳನ್ನು ಕೆತ್ತುವದಕ್ಕೆ ನೇಮಿಸಿದನು. ಇದಲ್ಲದೆ ಬಾಗಲುಗಳ ಕದಗಳಿಗೋಸ್ಕರ ಬೇಕಾದ ಮೊಳೆಗಳನ್ನೂ ಪಟ್ಟಿಗಳನ್ನು ಮಾಡುವದಕ್ಕೆ ಬಹಳ ಕಬ್ಬಿಣವನ್ನೂ, ಲೆಕ್ಕವಿಲ್ಲದಷ್ಟು ತಾಮ್ರವನ್ನೂ ಎಣಿಸಲಾರದಷ್ಟು ದೇವದಾರು ಮರಗಳನ್ನೂ ಸಿದ್ಧಪಡಿಸಿದನು; ಚೀದೋನ್ಯರೂ ತೂರ್ಯರೂ ಅವನಿಗೆ ದೇವದಾರು ಮರಗಳನ್ನು ತಂದುಕೊಟ್ಟರು. ದಾವೀದನು [ತನ್ನ ಮನಸ್ಸಿನಲ್ಲಿ] ನನ್ನ ಮಗನಾದ ಸೊಲೊಮೋನನು ಎಳೇ ಪ್ರಾಯದವನಾಗಿದ್ದಾನೆ; ಕರ್ತನಿಗೋಸ್ಕರ ಕಟ್ಟಿಸತಕ್ಕ ಆಲಯವು ಎಲ್ಲಾ ದೇಶಗಳಲ್ಲಿ ಕೀರ್ತಿಘನಗಳನ್ನು ಹೊಂದಬೇಕಾದರೆ ಅದು ಅಧಿಕ ಶೋಭಾಯಮಾನವಾದದ್ದಾಗಿರಬೇಕು; ಆದದರಿಂದ ಅದಕ್ಕೆ ಬೇಕಾಗುವದನ್ನೆಲ್ಲಾ ಸಿದ್ಧಪಡಿಸುವೆನು ಅಂದುಕೊಂಡು ಸಾಯುವದಕ್ಕೆ ಮೊದಲೇ ಬಹಳವಾಗಿ ಸೌರಣೆ ಮಾಡಿದನು (1 ಪೂರ್ವಕಾಲ ವೃತ್ತಾಂತ 22:2-5).

ದೇವರು ದಾವೀದನನ್ನು ಆಶೀರ್ವದಿಸಿ, ದೇವರ ಆತ್ಮನ ಪ್ರೇರಣೆಯಿಂದ, ದೇವಾಲಯದ ಕಟ್ಟಡ ಕುರಿತಾದ ನೀಲಿನಕ್ಷೆಯನ್ನು ನೀಡಿದನು.[51] ದಾವೀದನು ಸೊಲೊಮೋನನ್ನು ಕರೆದು "ಇಸ್ರಾಯೇಲ್ ದೇವರಾದ ಕರ್ತನ ಹೆಸರಿಗೋಸ್ಕರ ಆಲಯವನ್ನು ಕಟ್ಟಬೇಕೆಂದು ಆಜ್ಞಾಪಿಸಿ" (1 ಪೂರ್ವಕಾಲವೃತ್ತಾಂತ 22:6). ಆತನು ತನ್ನ ಮಗನೊಂದಿಗೆ ಹೀಗೆ ಹೇಳಿದನು,

> ಇಗೋ, ನಾನು ಬಹು ಪ್ರಯಾಸಪಟ್ಟು ಕರ್ತನ ಆಲಯಕ್ಕೋಸ್ಕರ ಒಂದು ಲಕ್ಷ ತಲಾಂತು ಬಂಗಾರವನ್ನೂ ಹತ್ತು ಲಕ್ಷ ತಲಾಂತು ಬೆಳ್ಳಿಯನ್ನೂ ಲೆಕ್ಕವಿಲ್ಲದಷ್ಟು ತಾಮ್ರ ಕಬ್ಬಿಣ ಇವುಗಳನ್ನೂ ಕಲ್ಲುಮರಗಳನ್ನೂ ಕೂಡಿಸಿದ್ದೇನೆ ... ಕಲ್ಲು ಕುಟಿಗರೂ ಶಿಲ್ಪಿಗರೂ - ಬಡಿಗಿಯವರೂ ಬಂಗಾರ ಬೆಳ್ಳಿ ತಾಮ್ರ ಕಬ್ಬಿಣಗಳ ಎಲ್ಲಾ ತರದ ಕೆಲಸವನ್ನು ಮಾಡುವದರಲ್ಲಿ ಜಾಣರೂ ನಿನಗಿರುತ್ತಾರೆ; ಅವರನ್ನು ಲೆಕ್ಕಿಸುವದಕ್ಕಾಗುವದಿಲ್ಲ. ಎಳು, ಕೆಲಸಕ್ಕೆ ಕೈ ಹಾಕು; ಕರ್ತನು ನಿನ್ನ ಸಂಗಡ ಇರಲಿ ಎಂದು ಹೇಳಿದನು (1 ಪೂರ್ವಕಾಲವೃತ್ತಾಂತ 22:14, 16).

ಖಗೋಳಶಾಸ್ತ್ರದ ಪ್ರಕಾರ ಕೋಟಿಯಾಂತರ ಹಣವನ್ನು ದೇವಾ ಲಯದ ಉಪಯೋಗಕ್ಕಾಗಿ ಲೆಕ್ಕ ಮಾಡಲಾಯಿತು!

> ತರುವಾಯ ದಾವೀದನು ತನ್ನ ಮಗನಾದ ಸೊಲೊಮೋನನಿಗೆ ದೇವಾಲಯದ ಮಂಟಪ, ಕೊಟ್ಟಾರಗಳು, ಭಂಡಾರಗಳು, ಮೇಲುಪ್ಪರಿಗೆಗಳು ಸುತ್ತಣ ಕೋಣೆ ಗಳು, ದೇವಾಲಯದ ಭಂಡಾರಗಳು, ಪ್ರತಿಷ್ಠಿತ ವಸ್ತುಗಳ ಭಂಡಾರಗಳು ಇವುಗಳ ವಿಷಯವಾಗಿಯೂ ಆರಾಧನೆಯ ಎಲ್ಲಾ ಸಾಮಾಗ್ರಿಗಳು ಇವುಗಳ ವಿಷಯವಾಗಿಯೂ, ತಾನು ... ನಿರ್ಣಯಿಸಿಕೊಂಡದೆಲ್ಲವನ್ನು ವಿವರಿಸಿದನು. ಆ ನಕ್ಷೆಗಳಲ್ಲಿ ಸೂಚಿಸಿದ, ಸರ್ವಕೆಲಸಗಳ ವಿಷಯವಾದ ಜ್ಞಾನವು ತನಗೆ ಕರ್ತನ ಲೇಖನದಿಂದಲೇ ಪ್ರಾಪ್ತವಾಯಿತ್ತೆಂದು ಹೇಳಿದನು (1 ಪೂರ್ವ ಕಾಲವೃತ್ತಾಂತ 28:11, 12, 19).

ದಾವೀದನು ತನ್ನ ಯೋಜನೆಯಂತೆ ಆಲಯದ ನಕ್ಷೆಯನ್ನು ತಯಾರಿಸದೆ ದೇವರಿಂದ ಪ್ರೇರಿತವಾಗಿ ದೊರಕಿದ, ನಕ್ಷೆಯನ್ನೆ ಸೊಲೊಮೋನನಿಗೆ ನೀಡಿದನು.

ದಾವೀದನು ತನ್ನ ಸ್ವಂತ ಆಶೆಯನ್ನು ಮರೆತು, ದೇವರ ಚಿತ್ತಕ್ಕೆ ಮಾತ್ರ ಒಳಗಾಗಿ ಈ ಎಲ್ಲಾ ಕಾರ್ಯಗಳನ್ನು ಉತ್ತಮವಾದ ಮನೋಭಾವನೆಯಿಂದ ಮಾಡಿದನು. ದೇವರಿಗೆ ಸಮೀಪಸ್ಥನಾಗಿರುವುದೇ ದಾವೀದನ ಆಶೆಯಾಗಿತ್ತು. ಇದೇ ಆರಾಧನೆಯ ಕುರಿತಾದ ವಿಷಯ ಸರಿಯಾದ ಮನೋಭಾವನೆಯಿಂದ ದೇವರನ್ನು ಆರಾಧಿಸಿದರೆ, ನಮ್ಮ ಮನಸ್ಸು ಹಾಗೂ ನಮ್ಮ ಜೀವಿತ ದೇವರ ಚಿತ್ತಕ್ಕೆ ಅನುಗುಣವಾಗಿರುತ್ತದೆ.

## ಮುಕ್ತಾಯ

ಯೆಶಾಯನು, ಕರ್ತನು ಉನ್ನತೋನ್ನತ ಸಿಂಹಾಸನರೂಢನಾಗಿರುವದನ್ನು ಕಂಡನು:

> ಅಯ್ಯೋ, ನನ್ನ ಗತಿಯನ್ನು ಏನು ಹೇಳಲಿ! ನಾಶವಾದೆನಲ್ಲಾ; ನಾನು ಹೊಲಸು ತುಟಿಯವನು, ಹೊಲಸುತುಟಿಯವರ ಮಧ್ಯದಲ್ಲಿ ವಾಸಿಸುವವನು; ಇಂಥ ನನ್ನ ಕಣ್ಣುಗಳು ರಾಜಾಧಿರಾಜನನ್ನು, ಸೇನಾಧೀಶ್ವರನಾದ ಕರ್ತನನ್ನು ಕಂಡವು ಎಂದು ಕೂಗಿಕೊಂಡನು (ಯೆಶಾಯ 6:5).

ನಾವು ಇಂಥ ಪರಿಶುದ್ಧವಾದ ಭೂಮಿಯ ಮೇಲೆ ನಿಂತಿದ್ದೇವೆಂದು ತಿಳಿದುಕೊಂಡು ದೇವರ ಸನ್ನಿದಿಯಲ್ಲಿ ಆರಾಧನೆಯನ್ನು ಸಲ್ಲಿಸುವದಾದರೆ ಅದು, ವಿಶೇಷವಾದ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಆರಾಧನೆಯ ಪ್ರಾಮುಖ್ಯತೆ ಬಗ್ಗೆ ನಮಗೆ ಪ್ರೋತ್ಸಾಹವಾಯಿತು ಎಂದು ನಾನು ನಿರೀಕ್ಷಿಸಿದ್ದೇನೆ!

ನಮ್ಮ ವ್ಯಯಕ್ತಿಕ ಧ್ಯಾನ ಒಟ್ಟಾಗಿ ಸೇರಿ ಬಂದು ಆರಾಧನೆಗೂ ಇದು ಪ್ರೋತ್ಸಾಹವಾಯಿತು ಎಂದು ತಿಳಿದಿದ್ದೇವೆ, ಆರಾಧನೆಯು ನಮ್ಮ ಧರ್ಮದ ಮೂಲವಾಗಿರುತ್ತದೆ. ಆದುದರಿಂದ ಆರಾಧನೆಗೆ ಹೆಚ್ಚು ಪ್ರಾಮುಖ್ಯತೆ ನೀಡಬೇಕು.

ಆರಾಧನೆಯನ್ನು ನಮ್ಮ ಜೀವಿತಕ್ಕೆ ಅಳವಡಿಸಿಕೊಳ್ಳುವದು ಒಂದು ಸಮಸ್ಯೆಯಾಗಿದೆ. ಆದರೆ ದಾವೀದನು ಆರಾಧನೆಯನ್ನು ತನ್ನ ಜೀವಿತಕ್ಕೆ ಅಳವಡಿಸಿಕೊಳ್ಳದೆ, ತನ್ನ ಜೀವಿತವನ್ನು ಆರಾಧನೆಯ ಸುತ್ತಲು ಅಳವಡಿಸಿಕೊಂಡು, ದೇವರನ್ನು ಸುತ್ತಿಸಿ ಗೌರವಿಸಿದನು, ದೇವರೊಂದಿಗಿನ ಸಂಬಂಧ ಕಹಿಯಾದಾಗ - ತನ್ನ ಮೂಲ ಉದ್ದೇಶವನ್ನು ಕಳಕೊಂಡಿದ್ದನು. ಎಂದು ದಾವೀದನಿಗೆ ತಿಳಿದಿತ್ತು, ನಾವು ದೇವರನ್ನು ಆರಾಧಿಸದೆ ನಮ್ಮ ಮನಸ್ಸನ್ನು ಬೇರೆ ಕಡೆಗೆ ಕೇಂದ್ರೀಕರಿಸುವಾಗ, ನಮ್ಮ ಹೃದಯದಲ್ಲಿ ಗುಣವಾಗುವ ಚಿಕ್ಕ ರಂಧ್ರಗಳು ಉಂಟಾಗುತ್ತವೆ.

"ದೇವರೇ, ಅನೇಕಸಾರಿ ನಿನಗೆ ಗೌರವ ನೀಡದೆ, ನಿನಗೆ ಸಲ್ಲ ತಕ್ಕದ್ದನ್ನು ಸಲ್ಲಿಸದೆ, ಈ ವಿಷಯದಲ್ಲಿ ಸೋತವರಾಗಿ ನಿನ್ನ ಸನ್ನಿಧಿಗೆ ಬಂದಿದ್ದೇವೆ. ನಮ್ಮ ಈ ರೀತಿಯಾದ ಆರಾಧನೆಯ ನಿಮಿತ್ತ ನೀನು ಯಾಕೆ ಯಾತನೆಯನ್ನು ಅನುಭವಿಸಬೇಕು? ಅದಕ್ಕಾಗಿ ನಿನಗೆ ಕೃತಜ್ಞತೆವುಳ್ಳವರಾಗಿದ್ದೇವೆ. ನಿನ್ನ ಸನ್ನಿಧಿಯ ಅನುಭವವನ್ನು ನಿನ್ನ ಪ್ರಸನ್ನತೆಯ ಅನುಭವವನ್ನು ಅನುಗ್ರಹಿಸು. ಇದರಿಂದ ನಾವು ದೀನರಾಗಿ ನಿನ್ನ ಹಾಗೆ ಆಗುವಂತೆ ಮಾಡು. ನಿನ್ನ ಹೃದಯಕ್ಕೆ ಸಮೀಪಸ್ಥರಾಗಿ ಈ ಕೂಟದಿಂದ ಹೊರಹೋಗಲು ಸಹಾಯಿಸಿ. ಯೇಸುವಿನ ನಾಮದಲ್ಲಿ ಆಮೆನ್."

---

ಟಿಪ್ಪಣಿಗಳು

[1]ಗಮನಿಸಿ ವಿಮೋಚನಕಾಂಡ 25:22. [2]"ಕೆರೂಬಿಯರು" ಇದರ ಬಹುಪದ "ಕೆರೂಬಿ." ಇವು ದೇವದೂತರುಗಳನ್ನು ಸೂಚಿಸುವ ಗುರುತು. [3]ವಿಮೋಚನಕಾಂಡ 25:12-15. [4]ಮಹಾಯಾಜಕನು - ತನ್ನ ಪಾಪಗಳಿಗಾಗಿಯೂ, ಜನರ ಪಾಪಗಳಿಗಾಗಿಯೂ ರಕ್ತವನ್ನು ತೆಗೆದುಕೊಂಡು ಕೃಪಾಸನದ

ಮೇಲೆ ಚಿಮುಕಿಸಿದನು. [5]ಅರಣ್ಯಕಾಂಡ 7:9; ಮತ್ತು ಧರ್ಮೋಪದೇಶಕಾಂಡ 10:8ನ್ನು ನೋಡಿರಿ. [6]NASBಯ ಪ್ರಥಮ ಮುದ್ರಣ ತಿಳಿಸುತ್ತದೆ "ಗಡ್ಡೆ ರೋಗ" ಎಂಬುದಾಗಿ, ಇತ್ತೀಚಿನ ಮುದ್ರಣದಲ್ಲಿ ಗಡ್ಡೆಗಳು ಎಂಬುದಾಗಿ ಇದೆ (1 ಸಮುವೇಲ 5:6; ಮುಂತಾದವು). [7]1 ಸಮುವೇಲ 6:7. [8]ಯೆಹೋಶುವ 21:16. [9]KJV ಮತ್ತು NASBಯಲ್ಲಿ 50,070 ಸತ್ತ ಜನರ ಸಂಖ್ಯೆ. NIV, NEB, ಬೇರೆ ಅನುವಾದದಲ್ಲಿ 70 ಎಂಬುದಾಗಿದೆ. [10]1 ಸಮುವೇಲ 7:2ರಲ್ಲಿ ಕಾಣಿಸಿರುವ 20 ವರ್ಷ ಬಹುಶ ಕಿರ್ಯಾತ್ಯಾರಿಮಿನಲ್ಲಿ ಮಂಜೂಷವನ್ನು ಇಟ್ಟ ದಿನದಿಂದ, ವಚನ 3ರಲ್ಲಿ ಸಮುವೇಲನು ಸಮೂಹದೊಂದಿಗೆ ಮಾತಾನಾಡಿದ ದಿನದ ಅಂತರದಲ್ಲಿ ಇದ್ದ ವರ್ಷಗಳು ಸಮುವೇಲನ ಕನಿಷ್ಟ 20 ವರ್ಷಗಳ ಸೇವೆ, ಸೌಲನ 40 ವರ್ಷಗಳ ಸೇವೆ, ಮತ್ತು ದಾವೀದನ ಆಡಳಿತದ 10 ವರ್ಷಗಳು. ಒಟ್ಟು 70 ವರ್ಷಗಳು.

[11]ಯೆಹೋಶುವ 15:9. [12]ವಿಶೇಷ ಸಂಧರ್ಭಕ್ಕೆ ಸಿದ್ಧ ಮಾಡಿದ *"ಹೊಸಬಂಡಿ"* ಅದು ಸೊಗಸಾಗಿತ್ತು ಎಂದು ನೆನಸುತ್ತೇನೆ. ಆದರೂ ದೇವರು ಅದನ್ನು ಇಷ್ಟಪಡಲಿಲ್ಲ. [13]ಗುಡಾರದ ಇತರ ವಸ್ತುಗಳನ್ನು ಸಾಗಿಸಲು ಉಪಯೋಗಿಸುತ್ತಿದ್ದ ಬಂಡಿಗಳ ನೆನಪು ಕೆಲವರಿಗೆ ಆಗಿರಬಹುದು (ಅರಣ್ಯಕಾಂಡ 7:3-8). [14]1 ಪೂರ್ವಕಾಲವೃತ್ತಾಂತ 13:7 ಹೇಳುತ್ತದೆ, ಬಂಡಿಯನ್ನು "ಎಳೆದರು." ಅವರು ಬಂಡಿಯ ಬಳಿಯಲ್ಲಿ ನಡೆದು, ಅದನ್ನು ಹತ್ತಿದ್ದ ಎತ್ತುಗಳನ್ನು ಎಳೆದರು ಎಂಬುದಾಗಿದೆ. [15]ಪುರಾತನ ಚಿತ್ರಗಳಲ್ಲಿ ಬಂಡಿಯು ಎರಡು ಚಕ್ರವುಳ್ಳದ್ದಾಗಿ ಎರಡು ಎತ್ತುಗಳ ಸಹಾಯದಿಂದ ಎಳೆಯಲ್ಪಟ್ಟವು ಎಂದು ಚಿತ್ರಿಸಲಾಗಿದೆ. [16]1 ಪೂರ್ವಕಾಲವೃತ್ತಾಂತ 13:9. 2 ಸಮುವೇಲ 6:6ರಲ್ಲಿ "ನಾಕೋನನ ಕಣ" ಎಂಬುದಾಗಿದೆ. ಬೈಬಲಿನಲ್ಲಿ ನಾಕೋನನ ಹೆಸರು ಬೇರೆ ಎಲ್ಲಿಯೂ ನಮೂದಾಗದೆ ಇರುವದರಿಂದ ಅದರ ಅರ್ಥ ತಿಳಿದಿರುವದಿಲ್ಲ. NEBಯಲ್ಲಿ "ಒಂದಾನೊಂದುಕಣ" ಎಂದು ಇದೆ. "ನಾಕೋನು" ಎಂಬುದು ಕೀದೋನಿಗೆ ಇರುವ ಮತ್ತೊಂದು ಹೇಸರೆಂದು ಯೋಚಿಸುತ್ತಾರೆ. [17]ಬೆಲೆಯುಳ್ಳದನ್ನು ನಾಶವಾಗದಂತೆ ಕಾಪಾಡಿದರೆ ಅವರಿಗೆ ಬಹುಮಾನ ದೊರಕುತಿತ್ತು, ಅವರಿಗೆ ಶಿಕ್ಷೆಯಾಗುತ್ತಿರಲಿಲ್ಲ. ಅದನ್ನು ಅವರು ಸರಿಯಾಗಿ ನಡಿಸಿಕೊಂಡು ಹೋಗಿದ್ದರೆ, ಅದು ಅಪಾಯದ ಸ್ಥಿತಿಗೆ ಹೋಗುತ್ತಿರಲಿಲ್ಲ. [18]ಆ ಸ್ಥಳಕ್ಕೆ "ಪೆರಚುಜ್ಜ" ಎಂದು ಹೆಸರಿಟ್ಟನು ಅದರ ಅರ್ಥ ಕರ್ತನ ಉಜ್ಜನನ್ನು ಮುರಿದು ಬಿಟ್ಟನು (ಉಜ್ಜನ ಮೇಲೆ ದೇವರ ಉಗ್ರಕೋಪ) (2 ಸಮುವೇಲ 6:8). ಅದು ದೈವಿಕ ಎಚ್ಚರಿಕೆಯಾಗಿರುವದರಿಂದ, ಬೇಗನೆ ಮರೆತುಬಿಡಬಾರದು. [19]"ಗಿತ್ತಿಯರು" ಅಂದರೆ ಗತ್ ಊರಿನವರು (2 ಸಮುವೇಲ 15:18), ಆದರೆ ಫಿಲಿಷ್ಟಿಯರ ಗತ್ ಊರಿಗೆ ಸೇರಿದವರಲ್ಲ. ಅನೇಕ ಇಸ್ರಾಯೇಲ್ಯರ ಪಟ್ಟಣಗಳಿಗೂ "ಗತ್" ಎಂಬ ಹೆಸರುಗಳಿದ್ದವು (ಯೆಹೋಶುವ 21:20-25); ಬಹುಶ ಅವನು ಈ ಊರಿನವನಾಗಿರ ಬಹುದು. ಲೇವಿಯರ ಜೊತೆಯಲ್ಲಿರುವ "ಓಬೇದ್ ಎ ದೋಮ್" ಎಂಬ ಹೆಸರಿರಬಹುದು (1 ಪೂರ್ವಕಾಲವೃತ್ತಾಂತ 15:18 ಮುಂತಾದವು). [20]ಈ ಕಥೆಯಲ್ಲಿ ದಾವೀದನು ವಾದ್ಯಗಳನ್ನು ಉಪಯೋಗಿಸಿದನು ಎಂದು ನೋಡುತ್ತೇವೆ. ಇದು ಹಳೆ ಒಡಂಬಡಕೆಯ ಆರಾಧನೆ ಸಭೆ ಸ್ಥಾಪನೆಯಾದಾಗ ಹೋಮ ಮತ್ತು ಯಜ್ಞಗಳ ಜೊತೆಯಲ್ಲಿ ವಾದ್ಯ ಗಳನ್ನು ಸಹ ತೆಗೆದುಹಾಕಲಾಯಿತು.

[21]ಮತ್ತಾಯ 15:9 ಯೇಸುವಿನ ಹೇಳಿಕೆಯನ್ನು ಗಮನಿಸಿ. [22]ಪಾಠವು ವ್ಯಯಕ್ತಿಕವಾಗಿ, ಪ್ರಾಯೋಗಿಕವಾಗಿ, ಯಾತನೆವುಳ್ಳದ್ದಾಗಿದೆ. [23]ಜ್ಞಾನೋಕ್ತಿ 1:7; ಹಬ್ಬಕ್ಕೂಕ 2:20. [24]2 ಸಮುವೇಲ 6:11. [25]ಹೋಲಿಸು 1 ಪೂರ್ವಕಾಲವೃತ್ತಾಂತ 14. [26]1 ಪೂರ್ವಕಾಲವೃತ್ತಾಂತ 15:1, 3, 12; ಮತ್ತು 2 ಸಮುವೇಲ 6:17. ಯಾಕೆ ದೇವರು ದಾವೀದನಿಗೆ ಒಡಂಬಡಿಕೆಯ ಮಂಜೂಷವನ್ನು ದೇವದರ್ಶನದ ಗುಡಾರದ ಅತಿ ಪರಿಶುದ್ಧವಾದ ಸ್ಥಳದಲ್ಲಿ ಇದು ಗೂಡಿಸದೆ ಬೇರೆ ಸ್ಥಳದಲ್ಲಿ ಇಡುವದಕ್ಕೆ ನಡಿಸಿದನು? ಇಲ್ಲಿ ಕೆಲವು ಯೋಜನೆಗಳು ಕೊಡಲಾಗಿದೆ. (1) ಮಂಜೂಷವು ಇತರೆ ಸ್ಥಳಗಳಲ್ಲಿ ಇರುವಾಗ, ಆಶೀರ್ವಾದವುಂಟಾಗಿತ್ತು. ಆದದ್ದರಿಂದ ಅದನ್ನು ಇಡಲು ಸ್ಥಳಗಳನ್ನು ಆರಿಸಿಕೊಳ್ಳುವ ಸ್ವತಂತ್ರವನ್ನು ಅವರಿಗೆ ನೀಡಲಾಗಿತ್ತು. (2) ಅದರೆ ಇತರ ಬಿಡಿ ಭಾಗಗಳು ಚದರಿ ಹೋದದ್ದರಿಂದ ಅವುಗಳನ್ನು ಒಟ್ಟಾಗಿ ಸೇರಿಸುವುದು ಮೊದಲ ಹೆಜ್ಜೆ. (3) ಒಂದು ವೇಳೆ ದಾವೀದನಿಗೆ ದೇವರಿಂದ ಉಂಟಾದ ಪ್ರಕಟಣೆ ಅದು, ಆದರೆ ನಮಗೆ ತಿಳಿಯದೆ ಇರಬಹುದು. [27]ಈ ಅಧ್ಯಾಯದಲ್ಲಿ ಮಾತ್ರ ಇಬ್ರೀಯ ಭಾಷೆಯಿಂದ ಅನುವಾದವಾ ದ "ಕುಣಿದನು" ಎಂಬ (2 ಸಮುವೇಲ 6:14, 16) ಪದವನ್ನು ನೋಡುತ್ತೇವೆ. ಅದರ ಅಕ್ಷರಾರ್ಥ "ಸುತ್ತುವರಿಯುವುದು." [28]1 ಪೂರ್ವಕಾಲವೃತ್ತಾಂತ 15:27; ಮತ್ತು 2 ಸಮುವೇಲ 6:14 ಸಹ ನೋಡಿರಿ. "ಎಫೋದು" ಅನ್ನುವಂಥದು "ಮೈಗೆ ಅಂಟಿಕೊಳ್ಳುವ ಬಟ್ಟೆ" ತೋಳಿಲ್ಲದ ಮೇಲಂಗಿ ಯಾಜಕರು ಅದನ್ನು ಧರಿಸುತ್ತಿದ್ದರು. ಆಳುಗಳು ಸಹ ಅದನ್ನು ಧರಿಸುತ್ತಿದ್ದರು ಆದರೆ ಅದು ಅರಸನು ಧರಿಸುವ ಅಂಗಿಯಾಗಿರಲಿಲ್ಲ (1 ಪೂರ್ವಕಾಲವೃತ್ತಾಂತ 15:27). [29]1 ಪೂರ್ವಕಾಲವೃತ್ತಾಂತ 16:8-36. ಹೋಲಿಸು 16:8-22 ಮತ್ತು ಕೀರ್ತನೆ 105:1-15.

ಹೋಲಿಸು 16:23-33 ಮತ್ತು ಕೀರ್ತನೆ 96. ಹೋಲಿಸು 16:34-36 ಮತ್ತು ಕೀರ್ತನೆ 106:1, 47, 48. [30]1 ಪೂರ್ವಕಾಲವೃತ್ತಾಂತ 15:13; KJV.

[31]ದೇವದರ್ಶನದ ಗುಡಾರ ಹಾಗೂ ಯಜ್ಞವೇದಿಯನ್ನು ನಿರ್ದಿಷ್ಟವಾದ ಸ್ಥಳ ಮತ್ತು ಕಟ್ಟಡ ದೊರಕುವವರೆಗೆ, ತಾತ್ಕಾಲಿಕವಾಗಿ ಗಿಬೆಯೋನಿನಲ್ಲಿ ಇಡಲಾಗಿತ್ತು. ಅದರ ಸೇವೆಗಾಗಿ ದಾವೀದನು ಜನರನ್ನು ನೇಮಿಸಿದನು (1 ಪೂರ್ವಕಾಲವೃತ್ತಾಂತ 16:39ff.). ದೇವಾಲಯವು ಕಟ್ಟಲ್ಪಟ್ಟಾಗ ಮಂಜೂಷವನ್ನೂ, ಯಜ್ಞವೇಧಿಯನ್ನೂ ಅಲ್ಲಿಗೆ ಸಾಗಿಸಲಾಯಿತು (ಹೋಲಿಸು 1 ಅರಸು 8:4; 2 ಪೂರ್ವಕಾಲವೃತ್ತಾಂತ 5:5). [32]2 ಸಮುವೇಲ 6:20ಎ. [33]ವಿವರಣೆಕಾರರು, ದಾವೀದನು ಬೆತ್ತಲೆಯಾಗಿದ್ದನು ಅಥವಾ ಇಲ್ಲ. ಈ ವಿಷಯವನ್ನು ಒಪ್ಪುವದಿಲ್ಲ. ನನ್ನ ವಿವರ ಅವನು ಬೆತ್ತಲೆಯಾಗಿರಲಿಲ್ಲ. [34]"ಅವಳಿಗೆ ಮಕ್ಕಳೇ *ಆಗಲಿಲ್ಲ*" ಎಂದು ಅದರ ಅರ್ಥ. "ಆಕೆಗೆ ಮಕ್ಕಳೇ ಇರಲಿಲ್ಲ" ಎಂಬುದೆ. 2 ಸಮುವೇಲ 21:8 KJV, NKJV ಬೇರೆ ಮುದ್ರಣಗಳು ಮೀಕಲಳು ಅನೇಕ ಮಕ್ಕಳನ್ನು ಪಡೆದಿದ್ದಳು ಎಂದು ತಿಳಿಸುತ್ತವೆ. ಹೇಗೂ ಸೆಪ್ಟಜೂಯಟ್, ಮತ್ತು ಇಬ್ರಿಯ ಬರವಣಿಗೆಗಳು "ಮೀಕಲಳ" ಬದಲಾಗಿ "ಮೇರಾಬಳು" ಎಂದು ತಿಳಿಸುತ್ತದೆ. ಇತ್ತಿಚಿನ ತರ್ಜುಮೆಗಳು ಇದನ್ನೇ ಪ್ರತಿ ಪಾದಿಸುತ್ತವೆ. [35]ಹಳೇ ಒಡಂಬಡಿಕೆಯಲ್ಲಿ "ಬಂಜೇತನವು" ಒಂದು ದೊಡ್ಡ ಶಾಪವಾಗಿತ್ತು (1 ಸಮುವೇಲ 1:5, 6 ಗಮನಿಸಿ). [36]2 ಸಮುವೇಲ 7:1 ಹೇಳುತ್ತದೆ, ಕರ್ತನ ಅನುಗ್ರಹದಿಂದ ಸುತ್ತಣ ವೈರಿಗಳ ಭಯವೆಲ್ಲಾ ತಪ್ಪಿಹೋಗಿ ಅರಸನು ಅರಮನೆಯಲ್ಲಿ ಸಮಾಧಾನದಿಂದ ಇದ್ದನು ಎಂದಿದೆ. ಅಧ್ಯಾಯ 6 ಮತ್ತು 7ರ ನಡುವಿನ ಅಂತರದಲ್ಲಿ ಅಧ್ಯಾಯ 8ರಲ್ಲಿ ನಮೂದಿಸಿರುವ ಯುದ್ಧಗಳು ಬಹುಶ ಜರುಗಿದ್ದವು. [37]ದಾವೀದನ ಇನ್ನುಳಿದ ಜೀವಮಾನ ಕಾಲವೆಲ್ಲಾ, ನಾತಾನನು ಅವನೊಂದಿಗೆ ಮುಖ್ಯ ಕಾರ್ಯಗಳನ್ನು ನಿರ್ವಹಿಸಿದನು ಎಂದು ನೋಡುತ್ತೇವೆ (2 ಸಮುವೇಲ 12:1-14; 1 ಅರಸು 1). ದಾವೀದನು ತನ್ನ ಮಗನಲ್ಲೊಬ್ಬನಿಗೆ "ನಾತಾನ" ಎಂದು ಹೆಸರಿಟ್ಟನು (2 ಸಮುವೇಲ 5:14). [38]ಯೆಶಾಯ 55:8; ಜ್ಞಾನೋಕ್ತಿ 14:12. [39]ಈ ಸಂದೇಶದಲ್ಲಿ, ದೇವರು ಇಸ್ರಾಯೇಲ್ಯರಿಗೋಸ್ಕರ ತಾನು ಮಾಡ ಬೇಕಾದ ಸಾಮಾನ್ಯ ಕಾರ್ಯಗಳ ವಿಚಾರವಾಗಿಯೂ, ಮತ್ತು ದಾವೀದನಿಗೆ ವ್ಯಯಕ್ತಿಕವಾಗಿ, ಮಾಡಬೇಕಾದ ನಿರ್ದಿಷ್ಟ ಕಾರ್ಯದ ಬಗ್ಗೆಯೂ ನೋಡುತ್ತೇವೆ, ಭವಿಷ್ಯದ ಬಗ್ಗೆಯೂ ನೋಡುತ್ತೇವೆ. [40]1 ಅರಸುಗಳು 5:3 ಗಮನಿಸಿ.

[41]"ಸಮ್ಮತಿಸು" ಅದರ ಮಾತಿನ ಅರ್ಥ "ಹೌದು ಎಂಬ ಹೇಳಿಕೆ." [42]"ದಾಖಲೆಯಿಂದ ತೆಗೆದು ಹಾಕು" ಅದರ ಮಾತಿನ ಅರ್ಥ ಅದನ್ನು "ಅವಲೋಕಿಸ ಬೇಡ" ಅಥವಾ "ಹೊರಗೆಬಿಸಾಡು" ಮೊದಲ ಭಾಗದಲ್ಲಿ ಮೊದಲ ಅರ್ಥ ಎರಡನೇ ಭಾಗದಲ್ಲಿ ಎರಡನೇ ಅರ್ಥ. [43]1 ಪೂರ್ವಕಾಲವೃತ್ತಾಂತ 22:6-10 ಮತ್ತು 28:6-10, ಇದನ್ನು ದಾವೀದನು 2 ಸಮುವೇಲ 7ರಿಂದ ಸಂಭೋದಿಸಿ, ಇದನ್ನು ಸಲೊಮೋನನಿಗೆ ಅನ್ವಯ ಮಾಡಿದನು. ದಾವೀದನು ಸೊಲೊಮೋನನಿಗೆ ಇದನ್ನು ಅನ್ವಯಿಸಿದ್ದು ಸರಿ ಎಂದು ನಾನು ನಂಬುತ್ತೇನೆ (ಉದಾಹರಣೆ ವಚನ 14). [44]1 ಅರಸುಗಳು 15:4. [45]ಲೂಕ 3:31ನ್ನು ಸಹ ನೋಡಿರಿ. [46]ಹೋಲಿಸು ದಾನೀಯೇಲ 2:44; ಯೆಶಾಯ 2:2-4; ಮಾರ್ಕ 1:14, 15; ಮತ್ತಾಯ 16:18, 19; ಮಾರ್ಕ 9:1; ಯೋಹಾನ 18:36; ಲೂಕ 24:45-49; ಅಪೋಸ್ತಲರ ಕೃತ್ಯಗಳು 1:6-8; 2:1-4; ಇಬ್ರಿಯ 12:28. [47]ಅಪೊಸ್ತಲರ ಕೃತ್ಯಗಳು 2:29-36; ಪ್ರಕಟಣೆ 3:7. [48]ಹೋಲಿಸು 1 ಕೊರಿಂಥ 15:24-27; ಕೊಲೊಸ್ಸೆ 1:13. [49]ದಾವೀದನು ನಾತಾನನ ಜೊತೆಯಲ್ಲಿ ಸ್ನೇಹಿತನೆಂದು ಮಾತನಾಡಿದನೋ? ಅಥವಾ ಪ್ರವಾದಿ ಯೆಂದು ತಿಳಿದು ಮಾತನಾಡಿದನೋ? ಇದು ಒಂದು ಪ್ರಶ್ನೆ. ಒಂದು ವೇಳೆ ಪ್ರವಾದಿಯೆಂದು ಮಾತನಾಡಿದ್ದರೆ, ಕಾರ್ಯಗಳ ವಿಷಯದಲ್ಲಿ ದೇವರ ಚಿತ್ತವೇನೆಂದು ಪರೀಕ್ಷಿಸುತ್ತಿದ್ದನು. ಆದರೆ ಅವನು ಸ್ನೇಹಿತನೆಂದು ತಿಳಿದು ಮಾತನಾಡಿದನು ಎಂದು ನನ್ನ ಊಯೆ, ಏನೇ ಇರಲಿ, ಆ ಪಾಪ ಪ್ರಜ್ಞೆಯು, ದಾವೀದನಲ್ಲಿ ಅಥವಾ ನಾತಾನನಲ್ಲಿ ಇದ್ದಿದ್ದರೂ, ಅವರು ದೇವರ (ಸಮ್ಮತಿಯನ್ನು) ಸಲಹೆಯನ್ನೂ ಪಡೆಯದೇ ಇದ್ದದೇ ದೊಡ್ಡ ತಪ್ಪು. [50]ಈ ವಚನ 1 ಪೂರ್ವಕಾಲವೃತ್ತಾಂತ 17:16 ಪ್ರಾರ್ಥನೆಗೆ ಕೂತುಕೊಳ್ಳುವ ವಿಷಯದಲ್ಲಿ ಬೈಬಲ್‌ನಲ್ಲಿ ಬರೆದಿರುವ ಏಕ ವಾಕ್ಯ ಮೊಣಕಾಲೂರುವದಕ್ಕೆ ವ್ಯತ್ಯಾಸವಿದೆ. ಪಾದದ ಮೇಲೆ ಕುಳಿತು ತಲೆಯನ್ನು ಮೇಲಕ್ಕೆ ಎತ್ತುವ ಪರಿ.

[51]ಹೋಲಿಸು 1 ಪೂರ್ವಕಾಲವೃತ್ತಾಂತ 28:19. ಒಬ್ಬ ಬರಹಗಾರನು "ಸಮಯಕ್ಕೆ ಅನುಗುಣವಾಗಿ," ಹೊಂದಿಸಿಕೊಳ್ಳಬಹುದು ಎಂದು ದೇವಾಲಯದ ಉದಾಹರಣೆಯನ್ನು ನೀಡಿದ್ದಾನೆ. ದೇವರ ಪ್ರಕಟಣೆಯನ್ನು ಸಮಯಕ್ಕೆ ಹೊಂದಿಸಿಕೊಳ್ಳುವುದು ಸರಿ ಎಂದು "ದಾವೀದನು, ದೇವದರ್ಶನದ ಗುಡಾರವನ್ನು" "ಸಮಯಕ್ಕೆ ಹೊಂದಿಕೊಳ್ಳುವಂತೆ" ಮಾಡಿದನು. ಈ ಕಾರ್ಯವನ್ನು *ದೇವರು* ಸ್ವತ ಮಾಡಿದನು ಎಂಬುದು ಗಮನಿಸಬೇಕಾದ ಮುಖ್ಯ ಸಂಗತಿ.